
ರಜತೋತ್ಸವ ಗ್ರಂಥಮಾಲೆ

ಬಿ. ಎಂ. ಶ್ರೀಕಂಠಯ್ಯ

ವ್ಯಕ್ತಿಚಿತ್ರ ಮತ್ತು ಸೂಕ್ತಿಗಳು

ಪ್ರೊ|| ಡಿ. ಲಿಂಗಯ್ಯ



ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

ರಜತೋತ್ಸವ ಗ್ರಂಥಮಾಲೆ-೮

ಕನ್ನಡ ನವೋದಯ ಪ್ರವರ್ತಕ

ಬಿ. ಎಂ. ಶ್ರೀಕಂಠಯ್ಯ

ವ್ಯಕ್ತಿಪರಿಚಯ ಮತ್ತು ಸೂಕ್ತಿಗಳು

ಪ್ರೊ. ಡಿ. ಲಿಂಗಯ್ಯ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

ಬಿ. ಎಂ. ಶ್ರೀ ಕಲಾಭವನ

೩ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು-೫೬೦೦೧೯

ಶಾಖೆ: ಬೆಳ್ಳೂರು, ನಾಗಮಂಗಲ ತಾಲ್ಲೂಕು

KANNADA NAVODAYA PRAVARTHAKA
B.M.SRIKANTIA - A pen portrait and sayings - by Prof. **D. LINGAIAH.** Published by B.M.SRI. Smaraka Prathisthana Memorial Foundation, 3rd Main Road, Narasimharaja colony, Bangalore-560019. 2005 Price : Rs. 20=00 Pages : xii + 44

ಪ್ರಥಮ ಮುದ್ರಣ - ೨೦೦೫

ಬೆಲೆ: ರೂ. ೨೦=೦೦

ಪ್ರಧಾನ ಸಂಪಾದಕರು
ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ

ಡಿ.ಟಿ.ಪಿ. :
ಸರಸ್ವತಿ ಡಿ.ಟಿ.ಪಿ.
ಹನುಮಂತನಗರ, ಬೆಂಗಳೂರು - ೫೦

ಮುದ್ರಕರು
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.
೧೬೪, ೫ನೆ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮ ದೂ : ೨೬೫೨೫೭೩೬

ಅಧ್ಯಕ್ಷರ ಮಾತು

ಪ್ರೊ. ಡಿ. ಲಿಂಗಯ್ಯನವರು ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಬೆಳ್ಳಿಹಬ್ಬದ ನಿಮಿತ್ತವಾಗಿ ಈ ಪುಟ್ಟಪುಸ್ತಕವನ್ನು ಸಂಕಲಿಸಿದ್ದಾರೆ.ಇದರಲ್ಲಿ ಬಿ. ಎಂ. ಶ್ರೀ ಅವರ ಜೀವನ ಪರಿಚಯವನ್ನು ಸಂಕ್ಷೇಪವಾಗಿ ಮೊದಲು ಮಾಡಿಕೊಟ್ಟು, ಅನಂತರದಲ್ಲಿ ಅವರ ಕೃತಿಗಳಿಂದಲೂ ಲೇಖನ, ಭಾಷಣ ಗಳಿಂದಲೂ ನೆನಪಿಟ್ಟುಕೊಳ್ಳಬೇಕಾದ ಸೂಕ್ತಿಗಳನ್ನು ಶ್ರಮವಹಿಸಿ ಆಯ್ದು ಪರಳಗೊಳಿಸಿದ್ದಾರೆ.

ಈ ಸಂಕಲನದ ಸೂಕ್ತಿಗಳಲ್ಲಿ ಕನ್ನಡಿಗರ ಬದುಕಿಗೆ, ಭಾಷಾಭಿವೃದ್ಧಿಗೆ ಬೇಕಾದ ಪೋಷಕಾಂಶಗಳುಂಟು. ಇವನ್ನು ಆಗಾಗ ಮನನ ಮಾಡುತ್ತ ನಮ್ಮ ಜನ ವರ್ಚಸ್ವಿಗಳಾಗಿ, ತೇಜಸ್ವಿಗಳಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಈ ಕೃತಿಯ ಪ್ರಕಟಣೆಗೆ ಕಾರಣರಾದ ಬೆಳ್ಳೂರು ಶಾಖೆಯ ಮಹಾಪೋಷಕರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಿಗೆ ನಮ್ಮ ಹೃತ್ಪೂರ್ವಕ ನಮನಗಳು ಸಲ್ಲುತ್ತವೆ. ಈ ಸಂಕಲನವನ್ನು ಸಿದ್ಧಪಡಿಸಿ ಪ್ರತಿಷ್ಠಾನದಲ್ಲಿ ಪ್ರಕಟಗೊಳಿಸಲು ಅವಕಾಶ ಮಾಡಿದ ಪ್ರೊ. ಡಿ. ಲಿಂಗಯ್ಯನವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಟಿ. ಎ. ವೆಂಕಟಾಚಲ ಶಾಸ್ತ್ರೀ
ಅಧ್ಯಕ್ಷ

ಎರಡು ನುಡಿ

ಬೆಳ್ಳೂರಿನಲ್ಲಿ ನಡೆದ ಸಭೆಯೊಂದರಲ್ಲಿ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಬೆಳ್ಳೂರು ಶಾಖೆಯ ಮಹಾಪೋಷಕರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಯವರು ಪ್ರಚಾರಕ್ಕಾಗಿ ಬಿ.ಎಂ.ಶ್ರೀಯವರ ಬಗೆಗೆ ಕಿರುಪುಸ್ತಕವನ್ನು ಸಿದ್ಧಪಡಿಸಿಕೊಡಿ ಎಂದರು. ಆ ಕಾರ್ಯವನ್ನು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸನ್ಮಾನ್ಯ ಪದಾಧಿಕಾರಿಗಳು ನನಗೆ ವಹಿಸಿದರು. ಅದರ ಫಲ ಈ ಕಿರುಹೊತ್ತಿಗೆ. ಇದನ್ನು ಬಿ.ಎಂ.ಶ್ರೀ. ಅಭಿಮಾನಿಗಳು ಕನ್ನಡ ಬಾಂಧವರು ಸದುಪಯೋಗಪಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

ಈ ಗ್ರಂಥದ ಪ್ರಕಟಣೆಗೆ ಸಹಕರಿಸಿದ ಹಿರಿಯ ಸಂಶೋಧಕರು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರೂ ಆದ ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರಿಗೆ ಹಾಗೂ ಗೌರವ ಕಾರ್ಯದರ್ಶಿಗಳಾದ ಪ್ರೊ. ನಾ ಗೀತಾಚಾರ್ಯರಿಗೆ ಆಭಾರಿಯಾಗಿದ್ದೇನೆ.

ಬೆಂಗಳೂರು
೨೨.೭.೨೦೦೫

ಡಿ. ಲಿಂಗಯ

ನಮ್ಮ ಮಾತು

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನಕ್ಕೆ ಈಗ ಇಪ್ಪತ್ತೈದರ ಸಂಭ್ರಮ. ಎಂ.ವಿ. ಸೀತಾರಾಮಯ್ಯ ಅವರಿಂದ ೧೯೭೯ ಮೇ ೬ ರಂದು ಸ್ಥಾಪನೆಯಾದ ಈ ಪ್ರತಿಷ್ಠಾನವನ್ನು ರಾಷ್ಟ್ರಕವಿ ಕುವೆಂಪು ಅವರು ಉದ್ಘಾಟನೆ ಮಾಡಿದರು. ಮಾಸ್ತಿಯವರು ಪೋಷಕರಾಗಿದ್ದರು. ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರು ಸ್ಥಾಪಕ ಅಧ್ಯಕ್ಷರಾಗಿ, ನಂತರ ಗೌರವಾಧ್ಯಕ್ಷರಾಗಿ ಸಂಸ್ಥೆಗೆ ಮಾರ್ಗದರ್ಶನ ನೀಡಿದ್ದಾರೆ. ಈ ಸಂಸ್ಥೆಯ ಸಂಸ್ಥಾಪಕರಾದ ಪ್ರೊ. ಎಂ.ವಿ. ಸೀತಾರಾಮಯ್ಯನವರು ಸಂಸ್ಥಾಪಕ ಕಾರ್ಯದರ್ಶಿಗಳಾಗಿ, ಅಧ್ಯಕ್ಷರಾಗಿ ಸಂಸ್ಥೆಯನ್ನು ಕಟ್ಟಿ–ಬೆಳೆಸಿ ಕನ್ನಡ ಜನತೆಗೆ ಬಿಟ್ಟುಹೋಗಿದ್ದಾರೆ. ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು, ಶ್ರೀ ಎನ್.ಬಸವಾರಾಧ್ಯ ಅವರು, ಈಗ ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ಪದಾಧಿಕಾರಿಗಳು, ಸಂಚಾಲಕರು, ಕಾರ್ಯಕರ್ತರು, ಸಕಲ ಸದಸ್ಯರು, ಕಾರ್ಯಸಮಿತಿ ಸದಸ್ಯರು ಸಂಸ್ಥೆಯ ಬೆಳವಣಿಗೆಯಲ್ಲಿ ಸಹಕರಿಸುತ್ತ ಬೆಳ್ಳಿ ಹಬ್ಬದ ಸಂಭ್ರಮವನ್ನು ತಂದಿದ್ದಾರೆ. ಈ ೨೫ ವರ್ಷಗಳಲ್ಲಿ ಪ್ರತಿಷ್ಠಾನ ನಿಷ್ಠೆಯಿಂದ ಸಾಧಿಸಿರುವ ಪಾಂಡಿತ್ಯದ ಕೆಲಸಗಳು ಹಲವು. ಅವುಗಳಲ್ಲಿ ಪ್ರಮುಖವಾದವು:

೧) ಮೌಲಿಕವಾದ ಪ್ರಕಟಣೆಗಳು : ಈವರೆಗೂ ಪ್ರತಿಷ್ಠಾನ ಎಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. 'ಮಣಿಹ', 'ಶ್ರೀನಿಧಿ', 'ಸಂಗಮರ ಕಾಲದ ವಿಜಯನಗರ', 'ಶ್ರೀಕೃಷ್ಣ ಬಾಲಲೀಲೆ', 'ಕುಮಾರವ್ಯಾಸಭಾರತ ಸಂಗ್ರಹ', 'ಎಂ.ವಿ.ಸೀ. ಸಮಗ್ರ ಸಾಹಿತ್ಯಸಂಪುಟಗಳು', 'ಮಧುರಸ್ಮೃತಿ' 'ಸಾಹಿತ್ಯೋಪಾಸಕರು' ಕೆಲವು. 'ದಶಮಾನೋತ್ಸವ ಕೃತಿಮಾಲೆ', 'ಜನ್ಮಶತಾಬ್ದಿ ಸ್ಮೃತಿಮಾಲೆ', 'ದತ್ತಿ ಉಪನ್ಯಾಸ ಮಾಲೆ', 'ಅಪ್ರಕಟಿತ ಹಸ್ತಪ್ರತಿಗಳ ಸಂಪಾದನೆ

ಮತ್ತು ಪ್ರಕಟಣೆ', 'ಸಹೃದಯಗೋಷ್ಠಿ ಕೃತಿಮಾಲೆ', 'ತಿಮ್ಮಪ್ಪದಾಸ ಪ್ರಕಾಶನಮಾಲೆ', – ದ್ವಿದಶಮಾನೋತ್ಸವ ಸ್ಮೃತಿಮಾಲೆ', 'ಸಾಹಿತ್ಯೋಪಾಸಕರು ಉಪನ್ಯಾಸಮಾಲೆ' ಹೀಗೆ ಹಲವು ಯೋಜನೆಗಳಲ್ಲಿ ವೈಚಾರಿಕ, ವಿದ್ವತ್ ಪೂರ್ಣ ಹಾಗೂ ಪಾಂಡಿತ್ಯ ಗ್ರಂಥಗಳನ್ನಷ್ಟೆ ಪ್ರಕಟಿಸುತ್ತಿರುವ ಪ್ರತಿಷ್ಠಾನ ಈ ವರ್ಷ ತನ್ನ ರಜತೋತ್ಸವ ಸ್ಮರಣೆಗಾಗಿ 'ರಜತೋತ್ಸವಮಾಲೆ'ಯಲ್ಲಿ ಕೆಲವು ಗ್ರಂಥಗಳನ್ನು ಪ್ರಕಟಿಸಲು ಯೋಜಿಸಿದೆ.

೨) ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣ ಪ್ರತಿಷ್ಠಾನದ ಬಹುಮುಖ್ಯವಾದ ಕಾರ್ಯ. ನಿರಂತರವಾಗಿ ಈ ಕಾರ್ಯವನ್ನು ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ. ಈವರೆಗೆ ಸುಮಾರು ಮೂರುಸಾವಿರ ಹಸ್ತಪ್ರತಿಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಸಂರಕ್ಷಿಸಿಕೊಂಡು ಬರಲಾಗುತ್ತಿದೆ. "ಹಸ್ತಪ್ರತಿಶಾಸ್ತ್ರ" ತರಗತಿಯನ್ನು ೧೯೯೦ ರಿಂದ ನಡೆಸುತ್ತಿದೆ. ಹಸ್ತಪ್ರತಿಶಾಸ್ತ್ರ ಎಂಬ ನೂತನ ಅಧ್ಯಯನ ಶಿಸ್ತನ್ನು ಹುಟ್ಟಿಹಾಕಿದೆ. ಪ್ರಾಚೀನ ಪರಂಪರೆಯ ಅಪರೂಪದ ಈ ಕಲೆಯಲ್ಲಿ ತರಬೇತಿ ನೀಡುತ್ತಿರುವ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆ ಪ್ರತಿಷ್ಠಾನಕ್ಕಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸುವುದರಿಂದ ಹಿಡಿದು ಅವುಗಳ ಸಂರಕ್ಷಣೆ, ಸೂಚಿತಯಾರಿಕೆ, ಸಂಪ್ರತಿಮಾಡುವುದು, ಓದುವುದು ಮತ್ತು ಗ್ರಂಥಸಂಪಾದನೆಯವರೆಗೆ ಈ ತರಗತಿಯಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಈ ತರಗತಿಯ ಹತ್ತುವರ್ಷದ ನೆನಪಿಗೆ ಹಳೆಯ ವಿದ್ಯಾರ್ಥಿಗಳು 'ಸಿರಿಕಂಟ' ಎಂಬ ವೇದಿಕೆಯನ್ನು ಹುಟ್ಟುಹಾಕಲಾಗಿದ್ದು, ಅದರ ಮೂಲಕ 'ಹಳಗನ್ನಡ ಕಾವ್ಯಾಭ್ಯಾಸ ಶಿಬಿರ', 'ಹಸ್ತಪ್ರತಿ ಸೇವಾಕೇಂದ್ರ' ಮತ್ತು 'ಹಸ್ತಪ್ರತಿ ಶಿಬಿರ'ಗಳನ್ನು ನಡೆಸಲಾಗುತ್ತಿದೆ.

೩) 'ಕರ್ನಾಟಕ ಲೋಚನ' ಎಂಬ ವಿದ್ವತ್ ಪತ್ರಿಕೆಯ ಪ್ರಕಟಣೆ: ಕರ್ನಾಟಕ ಲೋಚನ ಸದ್ಯಕ್ಕೆ ನಿಯತವಾಗಿ ಪ್ರಕಟವಾಗುತ್ತಿರುವ ಏಕೈಕ ಸಂಶೋಧನಪತ್ರಿಕೆ. ಹೊಸ ಹೊಸ ಸಂಶೋಧನೆಗಳು, ವಿದ್ವಾಂಸರ ಮೌಲಿಕವಿಚಾರಗಳು, ಟೀಕೆ–ಟಿಪ್ಪಣಿಗಳು, ವಿಚಾರಪೂರ್ಣ ಮತ್ತು ವಿದ್ವತ್‌ಗ್ರಂಥಗಳ ವಿಮರ್ಶೆ ಹೀಗೆ ವಿದ್ವತ್‌ಕ್ಷೇತ್ರಕ್ಕೆ ಈ ಪತ್ರಿಕೆ ಮೀಸಲಾಗಿದ್ದು ಪಂಡಿತ ಲೋಕದ ಮೆಚ್ಚುಗೆಗೆ ಪಾತ್ರವಾಗಿದೆ.

೪) 'ಸಹೃದಯ ಗೋಷ್ಠಿ' ಪ್ರತಿ ತಿಂಗಳ ಸಾಹಿತ್ಯವೇದಿಕೆ, ಪ್ರತಿಷ್ಠಾನದ ಆರಂಭದಿಂದಲೂ ನಿರಂತರವಾಗಿ ನಡೆದುಕೊಂಡು ಬರುತ್ತಿರುವ ಯೋಜನೆ. ಪ್ರತಿಷ್ಠಾನದ ಬಹುಪಾಲು ಕೆಲಸಗಳು ವಿದ್ವತ್ - ಕ್ಷೇತ್ರಕ್ಕೆ ಮೀಸಲಾಗಿದ್ದರೂ ಈ ಗೋಷ್ಠಿಯ ಮೂಲಕ ಸೃಜನ ಸಾಹಿತ್ಯಕ್ಕೂ ವೇದಿಕೆಯನ್ನು ಒದಗಿಸಿದೆ. ಹೊಸ ಹೊಸ ಕವಿಗಳು, ಲೇಖಕರು ತಮ್ಮ ಹೊಸ ಕವಿತೆ, ಕೃತಿ, ಲೇಖನಗಳನ್ನು ಇಲ್ಲಿ ಓದಿ, ಸಹೃದಯರ ಚರ್ಚೆಯಲ್ಲಿ ಬೆಳಕಿಗೆ ಬರುತ್ತಿದ್ದಾರೆ. ಆಧುನಿಕ ಕವಿ ಲೇಖಕರ ಸಾಹಿತ್ಯ ಚಿಂತನೆ ಈ ಗೋಷ್ಠಿಯ ಉದ್ದೇಶ. ಈ ಗೋಷ್ಠಿಯ ಮೂಲಕ 'ಮಾಸ್ತಿ ಸ್ಮರಣೆ', 'ಎಂ.ವಿ.ಸೀ.ಸ್ಮರಣೆ', 'ಗೋಕಾಕ್ ತಿಂಗಳ ನೆನಪು', 'ಶಂಬಾಸ್ಮೃತಿ', 'ಕುವೆಂಪು ಸ್ಮರಣೆ', 'ಕಾರಂತ ನಮನ' ಗಳಂತಹ ಸಾಂದರ್ಭಿಕ ಯೋಜನೆಗಳನ್ನು ಹಮ್ಮಿಕೊಂಡು ಪುಸ್ತಕ ರೂಪದಲ್ಲೂ ಪ್ರಕಟಿಸಲಾಗಿದೆ.

೫) ಬೆಳ್ಳೂರಿನಲ್ಲಿ ಶಾಖೆ: ಬಿ.ಎಂ.ಶ್ರೀ.ಯವರ ಹುಟ್ಟೂರಾದ ಬೆಳ್ಳೂರಿನಲ್ಲಿ ೧೯೮೪ರಲ್ಲಿ ನಡೆಸಿದ ಬಿ.ಎಂ.ಶ್ರೀ. ಜನ್ಮಶತಾಬ್ದದ ಸ್ಮರಣೆಗಾಗಿ ಶ್ರೀಯವರ ಮನೆಯಿದ್ದ ಸ್ಥಳದಲ್ಲಿ ನಿರ್ಮಿಸಿರುವ ಎರಡು ಮಹಡಿಗಳ 'ಆಚಾರ್ಯ ಬಿ.ಎಂ.ಶ್ರೀ. ಶತಮಾನೋತ್ಸವ ಭವನ' ೧೯೯೫ರಿಂದ ನಾಡಿಗೆ ಸಮರ್ಪಣೆಯಾಗಿದೆ. ಪ್ರತಿಷ್ಠಾನ ಅಲ್ಲಿ, ಶ್ರೀಶ್ರೀ ಶ್ರೀಬಾಲಗಂಗಾಧರನಾಥ ಸ್ವಾಮೀಜಿಯರ ಮಹಾ ಪೋಷಕತ್ವದಲ್ಲಿ ಸ್ಥಳೀಯ ಸಮಿತಿಯ ಸಹಕಾರದಿಂದ ಹಲವು ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. 'ಬಿ.ಎಂ.ಶ್ರೀ. ಸ್ಥಿರವಸ್ತು ಪ್ರದರ್ಶನ'ವನ್ನು 'ಶ್ರೀ ಶತಮಾನ ಗ್ರಂಥಾಲಯ' ಮತ್ತು 'ಶ್ರೀ ಸಭಾಂಗಣ' ಗಳನ್ನೂ ನಿರ್ವಹಿಸುತ್ತಿದೆ. ಆದರೆ ಆರ್ಥಿಕ ಸಹಕಾರವಿಲ್ಲದೆ ವಸ್ತು ಸಂಗ್ರಹಾಲಯವನ್ನು ವಿಸ್ತರಿಸಲಾಗಿಲ್ಲ. ದಾನಿಗಳು ಮುಂದೆ ಬರಬೇಕಾಗಿ ಕೋರಿದೆ.

೬) ಇವೆಲ್ಲಕ್ಕಿಂತ ಮುಖ್ಯವಾದ ಯೋಜನೆಯೆಂದರೆ ರಾಜಧಾನಿಯಲ್ಲಿ 'ಬಿ.ಎಂ.ಶ್ರೀ.ಕಲಾಭವನ' ನಿರ್ಮಾಣ. ಮೂರು ಮಹಡಿಗಳ ಸುಮಾರು ೩೫ ಲಕ್ಷರೂ.ಗಳ ಈ ಯೋಜನೆ ಸಮಸ್ತ ಕನ್ನಡಿಗರ ಸಹಕಾರದಿಂದಲೇ ಪೂರ್ಣಗೊಳ್ಳಬೇಕಾಗಿದೆ. ಇದನ್ನು ಆಚಾರ್ಯ ಪುರುಷರೂ ಹೊಸಗನ್ನಡ

ಮಾರ್ಗಪ್ರವರ್ತಕರೂ ಆಗಿರುವ 'ಬಿ.ಎಂ.ಶ್ರೀ.'ಯವರ ಹೆಸರಿನಲ್ಲಿ 'ಮಾದರಿ ಕವಿಸ್ಮಾರಕ' ಮಾಡುವುದು ನಮ್ಮ ಉದ್ದೇಶ. ಸಂಸ್ಥಾಪಕ ಸಿತಾರಾಮಯ್ಯನವರ ಈ ಕನಸಿನ ಕೂಸನ್ನು ನನಸುಮಾಡುವಲ್ಲಿ ಸಹಕರಿಸಿರುವ, ಸಹಕರಿಸುತ್ತಿರುವ ಎಲ್ಲ ಮಹನೀಯರಿಗೂ ಪ್ರತಿಷ್ಠಾನ ವಿಶೇಷವಾಗಿ ಆಭಾರಿಯಾಗಿರುತ್ತದೆ. ಈ ಭವನದ ನಿರ್ಮಾಣಕ್ಕೆ ಸಂಸದರೂ, ಮಾಜಿ ಕೇಂದ್ರ ಮಂತ್ರಿಗಳೂ ಆದ ಮಾನ್ಯ ಅನಂತಕುಮಾರ್ ಅವರು ಹತ್ತುಲಕ್ಷರೂಪಾಯಿಗಳನ್ನು, ದಿ॥ ರಾಮಕೃಷ್ಣ ಹೆಗಡೆಯವರು ಎರಡು ಲಕ್ಷರೂಪಾಯಿಗಳನ್ನು, ಕೇಂದ್ರ ಸಚಿವರಾದ ಶ್ರೀ ಎಂ.ವಿ. ರಾಜಶೇಖರನ್ ಅವರು ಐದು ಲಕ್ಷರೂಪಾಯಿಗಳನ್ನು ಸಂಸದರ ನಿಧಿಯಿಂದ ಉದಾರವಾಗಿ ಸಹಾಯ ಮಾಡಿದ್ದಾರೆ. ದಿ॥ ಶಿವರಾಮ ಕಾರಂತ, ಶ್ರೀ ವೀರೇಂದ್ರ ಹೆಗಡೆ, ಎಂ.ವಿ.ಸೀ. ಮಕ್ಕಳಾದ ಶ್ರೀ ಎಸ್.ಟಿ.ರಾಧಾಕೃಷ್ಣ, ಪಿ.ಇ.ಎಸ್.ಶಿಕ್ಷಣ ಸಂಸ್ಥೆಯ ಪ್ರೊ. ಎಂ.ಆರ್. ದೊರೆಸ್ವಾಮಿನಾಯ್ಡು, ಶ್ರೀಮತಿ ಸಾವಿತ್ರಮ್ಮ ರಾಮಸ್ವಾಮಿ ಮತ್ತು ಮಕ್ಕಳು, ಬಿ.ಎಂ.ಶ್ರೀ.ಯವರ ಮೊಮ್ಮಕ್ಕಳಾದ ಶ್ರೀಮತಿ ರತ್ನ ಎನ್.ರಾವ್, ಶಾಸಕರಾದ ಶ್ರೀ ಕೆ. ಚಂದ್ರಶೇಖರ್ ಮುಂತಾದವರು ಗಣನೀಯ ಪ್ರಮಾಣದಲ್ಲಿ ದಾನಮಾಡಿದ್ದು ಇನ್ನೂ ಅನೇಕ ದಾನಿಗಳ ಸಹಕಾರದಿಂದ ೨ ಮಹಡಿಗಳನ್ನು ನಿರ್ಮಿಸಲಾಗಿತ್ತು, ಈ ರಜತೋತ್ಸವ ವರ್ಷದಲ್ಲಿ ಇನ್ನೊಂದು ಮಹಡಿಯನ್ನು ನಿರ್ಮಿಸಿ, ಕಟ್ಟಡ ನಿರ್ಮಾಣವನ್ನು ಪೂರ್ಣಮಾಡಿ ಲೋಕಾರ್ಪಣೆ ಮಾಡಲಾಗಿದೆ.

೭) ಸ್ನಾತಕೋತ್ತರ ಸಂಶೋಧನ ಕೇಂದ್ರ : ಪ್ರತಿಷ್ಠಾನಕ್ಕೆ ಕೀರ್ತಿತಂದ ಮಹತ್ತರ ಸಾಧನೆಯೆಂದರೆ ಪ್ರತಿಷ್ಠಾನದ ಸಂಶೋಧನೆ ಚಟುವಟಿಕೆಗಳನ್ನು ಮಾನ್ಯಮಾಡಿ ೨೦೦೩ ರಿಂದ ಹಂಪೆ ಕನ್ನಡ ವಿಶ್ವವಿದ್ಯಾನಿಲಯ 'ಸಂಶೋಧನ ಕೇಂದ್ರ'ವಾಗಿ ಮಾನ್ಯತೆ ನೀಡಿದ್ದು. ಈ 'ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ'ದಲ್ಲಿ ಈಗ ೧೮ ಜನ ಸಂಶೋಧನಾರ್ಥಿಗಳು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕಾಗಿ ಪಿ.ಎಚ್‌ಡಿ. ಅಧ್ಯಯನ ನಡೆಸುತ್ತಿದ್ದಾರೆ. ಗೌರವಾನ್ವಿತ ಗಣ್ಯ ಮಾರ್ಗದರ್ಶಕರ ಸಹಕಾರದಿಂದ ಇದು ಯಶಸ್ವಿಯಾಗಿ ನಡೆಯುತ್ತಿದ್ದು ೨೦೦೭-೦೭ನೇ ಸಾಲಿನಿಂದ ಎಂ.ಫಿಲ್. ಪದವಿಯನ್ನು ಆರಂಭಿಸಲಾಗುತ್ತಿದೆ.

ಪ್ರಸ್ತುತ 'ಬೆಳ್ಳಿಹಬ್ಬ'ದ ನೆನಪಿಗಾಗಿ ೨೦೦೪ ಮೇ. ೬ ರಿಂದ ಇಡೀ ವರ್ಷವನ್ನು 'ರಜತೋತ್ಸವ ವರ್ಷ'ವನ್ನಾಗಿ ಕರೆದು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ರಜತಮಹೋತ್ಸವ ವರ್ಷದಲ್ಲಿ (i) 'ರಜತಸಿರಿ' ಎಂಬ ರಜತ ಸಂಚಿಕೆ ಹಾಗೂ 'ಸಾಹಿತ್ಯೋಪಾಸಕರು' ಎಂಬ ರಜತ ಸಂಪುಟ ಮತ್ತು 'ರಜತೋತ್ಸವ ಮಾಲೆ'ಯಲ್ಲಿ ಕೆಲವು ಮೌಲಿಕ ಗ್ರಂಥಗಳ ಪ್ರಕಟನೆ; (ii) ವಚನ-ಕೀರ್ತನೆ-ಜಾನಪದ-ಆಧುನಿಕ ಕವಿತೆಗಳನ್ನು ಸಂಗೀತಕ್ಕಳವಡಿಸುವ ಮತ್ತು ಯುವ ಕಲಾವಿದರನ್ನು ಪ್ರೋತ್ಸಾಹಿಸುವ ಉದ್ದೇಶದ ಪ್ರತಿತಿಂಗಳ ವೇದಿಕೆ 'ಸಿರಿಸಂಗೀತ', (iii) ಪ್ರಾಚೀನ ಓಲೆಗರಿ ಕಾಗದ ಪ್ರತಿಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿ-ಸಂಪ್ರತಿ ಮಾಡಿಕೊಡುವ ಹಸ್ತಪ್ರತಿ ಸೇವಾ ಕೇಂದ್ರ, (iv) ರಾಜ್ಯಾದ್ಯಂತ ಕರೆದಲ್ಲಿಗೆ ಹೋಗಿ ಹಸ್ತಪ್ರತಿಗಳನ್ನು ಪ್ರದರ್ಶಿಸಿ ಜಾಗೃತಿ ಮೂಡಿಸುವ 'ಮನೆ ಬಾಗಿಲಿಗೆ ಹಸ್ತಪ್ರತಿ ದರ್ಶನ', (v) ವಿಚಾರ ಗೋಷ್ಠಿಗಳು-ಹೀಗೆ ಹಲವು ರಜತೋತ್ಸವ ವಿಶೇಷ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

೨೦೦೪ ಸೆಪ್ಟೆಂಬರ್ ೧೦ ರಿಂದ ೧೫ರ ವರೆಗೆ ರಜತೋತ್ಸವ ಸಮಾರಂಭವನ್ನು ವೈಭವೋಪೇತವಾಗಿ ನಡೆಸಲಾಯಿತು. ಬಿ.ಎಂ.ಶ್ರೀ ಮತ್ತು ಎಂ.ವಿ.ಸೀ. ಅವರ ಲೋಹದ ಪ್ರತಿಮೆಗಳನ್ನು ಬಂಧುಗಳ ಸಹಕಾರದಿಂದ ಬಿ.ಎಂ.ಶ್ರೀ. ಕಲಾಭವನದಲ್ಲಿ ಸ್ಥಾಪಿಸಲಾಯಿತು. ಭವನವನ್ನು ವಿದ್ಯುಕ್ತವಾಗಿ ಮಾನ್ಯ ಮುಖ್ಯಮಂತ್ರಿ ಧರ್ಮಸಿಂಗ್ ಅವರು ಲೋಕಾರ್ಪಣೆ ಮಾಡಿ ನಿರ್ವಹಣೆಗಾಗಿ ಐದು ಲಕ್ಷರೂ. ಗಳ ಅನುದಾನವನ್ನು ನೀಡಿದರು. 'ರಜತಸಿರಿ' (ರಜತ ಸಂಚಿಕೆ) ಸಾಹಿತ್ಯೋಪಾಸಕರು (ರಜತ ಸಂಪುಟ) 'ಶ್ರೀಕೃಷ್ಣಲೀಲಾ ಗಾನಂ' 'ಗ್ರಂಥ ಸಂಪಾದನಾ ಪರಿಭಾಷಾಕೋಶ' 'ಕನ್ನಡ ತಿರುಕ್ಕುರಳ್' 'ಕಾರಂತ ಕಿರಣ', 'ತಿಮ್ಮಪ್ಪದಾಸರ ಕೀರ್ತನೆಗಳು', ಪುಸ್ತಕಗಳನ್ನು ರಜತೋತ್ಸವ ಮಾಲೆಯಲ್ಲಿ ಪ್ರಥಮ ಕಂತಾಗಿ ಬಿಡುಗಡೆ ಮಾಡಲಾಯಿತು. ಹಿಂದಿನ ಅಧ್ಯಕ್ಷರು ಪದಾಧಿಕಾರಿಗಳು, ದಾನಿಗಳಿಗೆ ಗೌರವಾರ್ಪಣೆ ಮಾಡಲಾಯಿತು. ಸಂಗೀತದ ಪ್ರಾಯೋಗಿಕ ಸಿರಿ ಸಂಗೀತ ಕಾರ್ಯಕ್ರಮಗಳು ಪ್ರತಿದಿನ ಸಂಜೆ ರಂಜಿಸಿದವು. ಪುಸ್ತಕ, ಹಸ್ತಪ್ರತಿಗಳೊಂದಿಗೆ ಪ್ರತಿಷ್ಠಾನ ನಡೆದು ಬಂದದಾರಿ-

ವಸ್ತುಪ್ರದರ್ಶನವೂ ಇತ್ತು. ಈ ಎಲ್ಲಾ ಯೋಜನೆಗಳೂ ಪ್ರತ್ಯೇಕ ಸಮಿತಿಗಳ ಮಾನ್ಯ ಅಧ್ಯಕ್ಷರ, ಸಂಚಾಲಕರ, ಸದಸ್ಯರ, ದಾನಿಗಳ, ಅಭಿಮಾನಿಗಳ, ಕಾರ್ಯಕರ್ತರ, ಸಹಕಾರದಿಂದ ಸಾಧ್ಯವಾಯಿತು, ಇವರೆಲ್ಲರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಸಂಸ್ಥಾಪಕ ಎಂ.ವಿ. ಸೀತಾರಾಮಯ್ಯನವರ ಮತ್ತು ಗೌರವಾಧ್ಯಕ್ಷರಾಗಿದ್ದ ನಿಟ್ಟೂರು ಶ್ರೀನಿವಾಸರಾಯರ ಬಲ, ಬೆಂಬಲ ನೂತನ ಗೌರವಾಧ್ಯಕ್ಷರೂ ನಾಡಿನ ಹಿರಿಯ ಕನ್ನಡಪರ ಚಿಂತಕರೂ ಆದ ಶ್ರೀ ಜಿ. ನಾರಾಯಣ ಅಧ್ಯಕ್ಷರೂ ಶ್ರೇಷ್ಠ ವಿದ್ವಾಂಸರೂ ಆದ ಡಾ॥ ಟೀ. ವಿ. ವೆಂಕಟಾಚಲಶಾಸ್ತ್ರಿಗಳ ಕ್ರಿಯಾಶೀಲ ಸಹಕಾರ ದಿಂದ ಪ್ರತಿಷ್ಠಾನ ಇಷ್ಟೆಲ್ಲ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಭಾವಿಸುತ್ತೇವೆ.

ರಜತೋತ್ಸವ ಮಾಲೆಯ ೨ನೇ ಕಂತಿನಲ್ಲಿ ಇನ್ನೂ ಕೆಲವು ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದ್ದು ಪ್ರಸ್ತುತ ಗ್ರಂಥ 'ಬಿ.ಎಂ.ಶ್ರೀಕಂಠಯ್ಯ' ೮ನೆಯ ಕುಸುಮವಾಗಿದೆ. ಈ ಕಂತಿನ ಉಳಿದ ಗ್ರಂಥಗಳೆಂದರೆ, 'ಎಂ.ವಿ. ಸೀತಾರಾಮಯ್ಯ', 'ಬಿ.ಎಂ.ಶ್ರೀ. ಪ್ರತಿಷ್ಠಾನ', 'ಶ್ರೀ ವೆಂಕಟದಾಸರು ಮತ್ತು ಇತರ ಅದ್ವೈತ ಹರಿದಾಸ ಕೀರ್ತನೆಗಳು', 'ಶತಮಾನಸ್ಮರಣೆ' ಮತ್ತು ಹಸ್ತಪ್ರತಿ ಸೂಚಿಗಳು.

ಈ ಗ್ರಂಥವನ್ನು ಸಿದ್ಧಪಡಿಸಿಕೊಟ್ಟ ಪ್ರತಿಷ್ಠಾನದ ಕೋಶಾಧಿಕಾರಿಗಳೂ ಖ್ಯಾತ ಜಾನಪದ ವಿದ್ವಾಂಸರೂ ಆದ ಪ್ರೊ॥ ಡಿ. ಲಿಂಗಯ್ಯನವರಿಗೂ, ಅಂದವಾಗಿ ತಪ್ಪಿಲ್ಲದೆ ಅಕ್ಷಜೋಡಣೆ ಮಾಡಿದ ಪ್ರೊ॥ ಸರಸ್ವತಿ ಜಿ. ಶಂಕರಯ್ಯ ಅವರಿಗೂ, ಸುಂದರವಾಗಿ ಮುದ್ರಣ ಮಾಡಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ. ನ ಮಾಲೀಕರಾದ ಶ್ರೀ ಎಲ್. ಲಿಂಗಪ್ಪ ಮತ್ತು ಸಿಬ್ಬಂದಿಯವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ನಾ. ಗೀತಾಚಾರ್ಯ
ಗೌರವ ಕಾರ್ಯದರ್ಶಿ

ಪರಿವಿಡಿ

ಕನ್ನಡ ನವೋದಯ ಪ್ರವರ್ತಕ

ಬಿ.ಎಂ. ಶ್ರೀಕಂಠಯ್ಯ

ಕನ್ನಡನವೋದಯ ಸಾಹಿತ್ಯದ ಅಧ್ವರ್ಯು, ಕನ್ನಡಕಣ್ವ, ಕನ್ನಡಕಣ್ಮಣಿ, ಕನ್ನಡಿಗರ ಸ್ಫೂರ್ತಿಸೆಲೆ, ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು ತುಮಕೂರು ಜಿಲ್ಲೆ ಸಂಪಿಗೆಯಲ್ಲಿ ಜನಿಸಿದರು(೩-೧-೧೮೮೪). ತಿಪಟೂರು ತಾಲ್ಲೂಕು ಸಂಪಿಗೆ ಅವರ ತಾಯಿಯ ತೌರೂರು. ಶ್ರೀಯುತರ ತಂದೆ ಹಾಗೂ ಪೂರ್ವಿಕರ ನೆಲೆ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು. ಹಾಗಾಗಿ ಅವರ ಹೆಸರು ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ ಆಯಿತು. ಅವರ ತಂದೆಯ ಹೆಸರು ಮೈಲಾರಯ್ಯ. ಅವರ ತಾಯಿಯ ಹೆಸರು ಭಾಗೀರಥಮ್ಮ. ಆ ದಂಪತಿಗಳಿಗೆ ಐದು ಮಂದಿ ಮಕ್ಕಳು : ಬಿ.ಎಂ.ಶ್ರೀಕಂಠಯ್ಯ, ಕಾವೇರಮ್ಮ, ಬಿ. ನಂಜಮ್ಮ, ಬಿ.ಎಂ.ಶಿವರಾಮಯ್ಯ, ಮತ್ತು ಬಿ.ಎಂ. ಕೃಷ್ಣಸ್ವಾಮಿ. ಬೆಳ್ಳೂರಿನಲ್ಲಿ ಅವರ ಬಾಲ್ಯ ಕಳೆದದ್ದು ಕಡಮೆ. ಅವರ ತಂದೆ ಶ್ರೀರಂಗಪಟ್ಟಣದಲ್ಲಿ ವಕೀಲರಾಗಿದ್ದುದರಿಂದ ಅವರ ಬಾಲ್ಯ ಅಲ್ಲಿ ಕಳೆದದ್ದು ಹೆಚ್ಚು. ಅವರು ಸಂಪ್ರದಾಯಸ್ಥ ಬ್ರಾಹ್ಮಣ ಜನಾಂಗಕ್ಕೆ ಸೇರಿದವರು. ಬಬ್ಬೂರು ಕಮ್ಮೆ ಒಳಪಂಗಡ. ಅವರ ಮನೆದೇವರು ಮೈಲಾರಲಿಂಗ. ಬಿ. ಎಂ. ಶ್ರೀಕಂಠಯ್ಯನವರು "ಶ್ರೀರಂಗಪಟ್ಟಣದ ಕಾವೇರಿಯ ನೀರನ್ನು ಕುಡಿದು ಬೆಳೆದವ ನಾನು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಧಾರ್ಮಿಕ ಹಾಗೂ ಐತಿಹಾಸಿಕ ಸ್ಥಳವಾದ ಶ್ರೀರಂಗಪಟ್ಟಣ ಶ್ರೀಕಂಠಯ್ಯನವರ ಮೇಲೆ ಬಹಳ ಪ್ರಭಾವ ಬೀರಿತು. ಅಲ್ಲಿ ಉತ್ತಮ ಒಡನಾಡಿಗಳೂ ದೊರಕಿದರು. ಬಸರಾಳು ಶ್ರೀಕಂಠಯ್ಯ ಮೊದಲಾದ ಸ್ನೇಹಿತರು ಅವರ ಪಾಲಿಗಿದ್ದರು. ಕಾವೇರಿ ನದಿ ದಂಡೆಯಲ್ಲಿ ಸೀಬೆಹಣ್ಣು, ಮಾವಿನಹಣ್ಣು ಕೀಳುವುದು : ಕಾವೇರಿ ನದಿಯಲ್ಲಿ ಈಜಾಡುವುದು; ಆದಿರಂಗ ದೇವಾಲಯದ ಹತ್ತಿರ ಸುತ್ತಾಡುವುದು; ರಂಗನಾಥಸ್ವಾಮಿಯ ತೇರು ಎಳೆಯುವುದು; ಗಂಗಾಧರ ಗುಡಿಯಲ್ಲಿ ಪೂಜೆ, ಪ್ರಸಾದಗಳಿಗೆ ನಿಲ್ಲುವುದು ಅವರಿಗೆ ಪ್ರಿಯವಾಗಿದ್ದವು. ಸಾಂಪ್ರದಾಯಿಕ ಮನೆತನದಲ್ಲಿ ಶೈಕ್ಷಣಿಕ ವಾತಾವರಣವೂ ಇತ್ತು.

ಬಿ.ಎಂ.ಶ್ರೀಕಂಠಯ್ಯನವರ ಶಿಕ್ಷಣ ಶ್ರೀರಂಗಪಟ್ಟಣ, ಮೈಸೂರು, ಬೆಂಗಳೂರು, ಮದರಾಸುಗಳಲ್ಲಿ ನಡೆದು ಇಂಗ್ಲಿಷ್ ಎಂ.ಎ. ಮತ್ತು ಕಾನೂನು ಶಾಸ್ತ್ರದ ಬಿ.ಎಲ್. ಪದವಿಗಳನ್ನು ಗಳಿಸಿದರು. ಆಟದಲ್ಲೂ ಓದಿನಲ್ಲೂ ಅವರು ಸದಾ ಮುಂದಾಗಿರುತ್ತಿದ್ದರು. ಉನ್ನತ ಶಿಕ್ಷಣ ನಡೆಯುತ್ತಿದ್ದಂತೆ ಅವರಿಗೆ ಬೆಳ್ಳೂರು ರಾಮಸ್ವಾಮಿಯವರ ಮಗಳು ದೇವಮ್ಮ (ಗುಂಡಮ್ಮ) ನವರೊಡನೆ ವಿವಾಹವಾಯಿತು. ಅವರಿಗೆ ಮೂವರು ಮಕ್ಕಳು: ಶಾರದಮ್ಮ, ತಂಗಮ್ಮ. ಮತ್ತು ತಮ್ಮಯ್ಯ.

ವಕೀಲರಾದ ಮೈಲಾರಯ್ಯನವರಿಗೆ ತಮ್ಮ ಮಗ ತಮ್ಮ ಹಾಗೆ ವಕೀಲನಾಗಬಾರದೆಂದೂ ವೈದ್ಯನಾಗಬೇಕೇಂದೂ ಆಸೆ. ಆದರೆ ಬಿ.ಎಂ.ಶ್ರೀಕಂಠಯ್ಯನವರು ಕಾನೂನು ಶಾಸ್ತ್ರ ಓದಿದರು. ಪುಣ್ಯಕ್ಕೆ ವಕೀಲರಾಗಲಿಲ್ಲ, ಅಷ್ಟೆ. ವೈದ್ಯಕೀಯಶಾಸ್ತ್ರ ಓದಲಿಲ್ಲ, ವೈದ್ಯರೂ ಆಗಲಿಲ್ಲ. ಹಾಗಾಗಿ ತಂದೆಯ ಆಸೆ ನೆರವೇರಲಿಲ್ಲ. ಈ ಬಗೆಗೆ ಶ್ರೀಕಂಠಯ್ಯನವರೇ ಹೀಗೆ ಹೇಳಿಕೊಂಡಿದ್ದಾರೆ: "ನನ್ನ ತಂದೆಯವರು ನನ್ನನ್ನು ಕುರಿತು, ನೀನು ನನ್ನ ಹಾಗೆ ವಕೀಲಿ ವೃತ್ತಿಗೆ ಹೋಗಬೇಡ; ಅದು ನನಗೇ ಸಾಕು, ನೀನು ವೈದ್ಯನಾಗು" ಎಂದು ಹೇಳುತ್ತಿದ್ದರು. ವೈದ್ಯರ ಪವಿತ್ರವೃತ್ತಿಯೂ ನನಗೆ ಲಭಿಸಲಿಲ್ಲ. ಎಲ್ಲಾ ಕಡೆಯೂ ಸೋತವರು ಉಪಾಧ್ಯಾಯ ವೃತ್ತಿಗೆ ಬರುವರೆಂಬ ಲೋಕೋಕ್ತಿಯಂತೆ

"ನಾನು ಕಡೆಗೆ ಉಪಾಧ್ಯಾಯನಾದೆ. ಕರುಣಾಳು ಬೆಳಕು ನನ್ನನ್ನು ನನ್ನ ಹೃದಯಕ್ಕೆ ಒಗ್ಗಿದ ಕೆಲಸಕ್ಕೇ ತಂದುಬಿಟ್ಟಿತು".

ಅಂದಿನ ಪ್ರತಿಭಾವಂತರಂತೆ ಬಿ.ಎಂ.ಶ್ರೀ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕಟ್ಟಿದರು. ಅದರಲ್ಲಿ ಯಶಸ್ವಿಯಾಗಲಿಲ್ಲ. ಅವರೇ ಹೇಳಿಕೊಂಡಿರುವಂತೆ, "ಇವರಿಬ್ಬರೂ (ಮಾಧವರಾವ್ ಮತ್ತು ಎ.ವಿ.ರಾಮನಾಥನ್) ನನ್ನನ್ನು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಅದುಮಿ ತಾವು ಮೇಲಕ್ಕೇರಿದರು; ಹೀಗಾಗಿ ನನ್ನ ಕಾರ್ಯಕ್ಷೇತ್ರ ಬೇರೆಯಾಯಿತು". ಬಿ.ಎಂ.ಶ್ರೀಯವರು ಇಂಗ್ಲಿಷ್-ಭಾಷೆಯನ್ನು ವಿಶೇಷವಾಗಿ ಅಧ್ಯಯನ ಮಾಡಿದವರು; ಅದನ್ನೇ ಉಸಿರಾಗಿ ಮಾಡಿಕೊಂಡವರು.

ಇಂಗ್ಲಿಷ್ ಭಾಷೆಯನ್ನು ಹೊರತಾಗಿ ಅನ್ಯಭಾಷೆಯ ಸಂಪರ್ಕವೇ ಅವರಿಗಿಲ್ಲವೇನೋ ಎಂಬಂತೆ ಹೊರಗೆ ತೋರಿಸಿಕೊಂಡವರು. ಆದರೆ ಆಂತರ್ಯದಲ್ಲಿ ಅವರ ಮನಸ್ಸು ಕನ್ನಡಕ್ಕಾಗಿ ದುಡಿಯಲು ಹಾತೊರೆಯುತ್ತಿತ್ತು. ವಿದ್ಯಾರ್ಥಿದಶೆಯಲ್ಲೇ ಆ ಭಾವನೆ ನಿಚ್ಚಳವಾಗಿತ್ತು. ಕನ್ನಡ ಪರವಾದ ಅವರ ಮನದಿಚ್ಛೆಯನ್ನು ಅವರೇ ತಮ್ಮ ಕಲಬುರ್ಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಹೀಗೆ ಹೇಳಿಕೊಂಡಿದ್ದಾರೆ :

"ಈಗಲೂ ನನಗೆ ಜ್ಞಾಪಕವಿದೆ – ಮದರಾಸಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ, ನನ್ನ ಸ್ನೇಹಿತರೂ ನಾನೂ ಸಾಯಂಕಾಲ ಸಮುದ್ರ ತೀರದಲ್ಲಿ ಮರಳಿನ ಮೇಲೆ ಕುಳಿತು ಸಮಾಜದ ಮತ್ತು ಸಾಹಿತ್ಯದ ವಿಷಯಗಳನ್ನು ಚರ್ಚಿಸುತ್ತ, ಹೀಗೆ ಮಾಡಬೇಕು, ಹಾಗೆ ಮಾಡಬೇಕು, ಕನ್ನಡ ನಾಡಿಗೆ, ಕನ್ನಡ ನುಡಿಗೆ, ನಮ್ಮ ಬಾಳಿಕೆಯನ್ನೇ ಕಾಣಿಕೆಯಾಗಿ ಒಪ್ಪಿಸಿಬಿಡಬೇಕು ಎಂಬ ಪೌರುಷವನ್ನು ಕೊಚ್ಚಿಕೊಳ್ಳುತ್ತಿದ್ದುದು; ಕನ್ನಡ ಕಾವ್ಯಗಳನ್ನೆಲ್ಲ ಓದಬೇಕು, ಜನರಲ್ಲಿ ಬಳಕೆಗೆ ತರಬೇಕು, ಉಪಾಧ್ಯಾಯನಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಪ್ರೇಮವನ್ನು ಬಿತ್ತಬೇಕು, ಜನ ಸಾಮಾನ್ಯಕ್ಕೆ ತಿಳುವಳಿಕೆಯೂ ಹೊಸ ನಡೆವಳಿಕೆಯೂ ಹುಟ್ಟುವಂತೆ ಕಾಲಕ್ಕೆ ತಕ್ಕ ಪುಸ್ತಕಗಳನ್ನು ಬರೆಯಬೇಕು, ಷೇಕ್ಸ್‌ಪಿಯರನ ನಾಟಕಗಳನ್ನೂ ಗ್ರೀಕರ ರುದ್ರ ನಾಟಕಗಳನ್ನೂ, ಪ್ಲೇಟೋವಿನ ಸಂವಾದಗಳನ್ನೂ ಕಾರ್ಲೈಲಿನ ಧೀರೋಪದೇಶಗಳನ್ನೂ ಕನ್ನಡಕ್ಕೆ ತರಬೇಕು". ಬಿ.ಎಂ.ಶ್ರೀ ಯವರು ಸುಮಾರು ೧೯೦೦ ರಿಂದ ಕನ್ನಡ ಭಾಷಾಸಾಹಿತ್ಯ ಕೃತಿಗಳನ್ನು ಒಳಗೊಳಗೇ ಓದಿಕೊಳ್ಳುತ್ತಿದ್ದರೂ ಅವರ ಕನ್ನಡದ ಹಂಬಲ, ಕನ್ನಡದಲ್ಲಿ ಬರೆಯುವ ಛಲ ಹೊರಜಗತ್ತಿಗೆ ತಿಳಿಯಬೇಕಾದರೆ ೧೯೨೦ರ ವರೆಗೆ ಕಾಯುಬೇಕಾಯಿತು.

ಬಿ.ಎಂ.ಶ್ರೀಯವರ ಬಾಲ್ಯದಲ್ಲಿ ಕನ್ನಡದ ಸ್ಥಿತಿ ಹೀನಾಯವಾಗಿತ್ತು. ಅವರೇ ಒಂದೆಡೆ ಹೀಗೆ ಹೇಳಿದ್ದಾರೆ: "ನಾನು ಹುಡುಗನಾಗಿದ್ದ ಕಾಲದಲ್ಲಿ ಕನ್ನಡವನ್ನು ಕೇಳುವವರೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು". ಇಂಥ ನಿರ್ಲಕ್ಷ್ಯ ಪರಿಸ್ಥಿತಿಯನ್ನು ನಿವಾರಿಸಬೇಕೆಂಬ ಛಲ ಅವರಿಗೆ, ದೈವಪ್ರೇರಣೆಯಿಂದ ಬಂದಿರಬೇಕು; ವಿದ್ಯಾರ್ಥಿದಶೆಯ ಕಾಲಕ್ಕೆ

ಪರಿಣಾಮಕಾರಿಯಾಗಿರಬೇಕು. ಅದು ಮುಂದೆ ಕನ್ನಡದ ದುಡಿಮೆಗೆ ಪ್ರೇರಣೆಯಾಗಿರುವ ಸಾಧ್ಯತೆಯಿದೆ.

ತಂದೆಯ ಆಸೆಯಂತೆ ವೈದ್ಯನೂ ಆಗದೆ ಕಾನೂನುಶಾಸ್ತ್ರ ಓದಿದರೂ ವಕೀಲನೂ ಆಗದೆ, ಬಿ.ಎಂ.ಶ್ರೀಕಂಠಯ್ಯನವರು ಕಾಲೇಜು ಅಧ್ಯಾಪಕ ವೃತ್ತಿಗೆ ಪ್ರವೇಶಿಸಿದ್ದು ಕನ್ನಡಿಗರ ಪುಣ್ಯವೆನ್ನಬೇಕು. ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಶಿಕ್ಷಣಕ್ಷೇತ್ರವನ್ನು ಪ್ರವೇಶಿಸಿ

ಅವಿಚ್ಛಿನ್ನವಾಗಿ ಮೂವತ್ತೆರಡು ವರ್ಷ ಸೇವೆಸಲ್ಲಿಸಿದರು (೧೯೧೦-೪೨). ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರಾಗಿ ಆಡಳಿತಾನುಭವವನ್ನು ಗಳಿಸಿದರು (೧೯೨೬-೩೦). ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದುಕೊಂಡು, ಮೊತ್ತಮೊದಲ ಕನ್ನಡ ಪ್ರಾಧ್ಯಾಪಕರಾಗಿಯೂ ನೇಮಕಗೊಂಡರು (೧೯೨೭). ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲೂ ಕೆಲವು ಕಾಲ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಸೇವೆಯಿಂದ ನಿವೃತ್ತರಾದ ಮೇಲೆ, ಧಾರವಾಡದ ಕೆ.ಇ. ಬೋರ್ಡ್ ಕಲಾ ಕಾಲೇಜಿನ ಪ್ರಾಂಶುಪಾಲರಾಗಿದ್ದರು (೧೯೪೨-೪೬).

ಬಿ.ಎಂ.ಶ್ರೀಯವರು ಕನ್ನಡ, ಇಂಗ್ಲಿಷ್, ಸಂಸ್ಕೃತ, ತಮಿಳು, ಗ್ರೀಕ್‌ಭಾಷೆಗಳಲ್ಲಿ ಪರಿಣತರಾಗಿದ್ದರು. ಹಲವು ಭಾಷೆಗಳ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಭ್ಯಾಸಮಾಡಿದ್ದರು. ಅವರ ಕಂಠಶ್ರೀ, ವಾಕ್ಚಟುತ್ವ, ಮೇರುವ್ಯಕ್ತಿತ್ವ, ಪಾಂಡಿತ್ಯ, ಸೃಜನಶೀಲಪ್ರತಿಭೆ, ಕನಸುಗಾರಿಕೆ, ಕಲ್ಪನಾಶ್ರೀಮಂತಿಕೆ, ಅಸಾಧಾರಣ ಸಾಹಿತ್ಯಸೃಷ್ಟಿ, ರಾಜಭಕ್ತಿ, ರಾಷ್ಟ್ರಪ್ರೇಮ, ನಾಡು ನುಡಿ ಸಂಸ್ಕೃತಿನಿಷ್ಠೆ ಅನುಪಮವಾಗಿದ್ದವು.

ಬಿ.ಎಂ.ಶ್ರೀಕಂಠಯ್ಯನವರ ಪ್ರಭಾವಲಯದಲ್ಲಿ ವಿದ್ಯಾರ್ಜನೆ ಮಾಡಿದ ಅನೇಕ ಶಿಷ್ಯರು ಮುಂದೆ ತಮ್ಮ ಜೀವಿತ ಕಾಲದಲ್ಲಿ, ಅಪೂರ್ವ ಸಾಧನೆಮಾಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರ ಶಿಷ್ಯಸಮೂಹದಲ್ಲಿ – ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರೀ, ಕುವೆಂಪು, ಡಿ.ಎಲ್. ನರಸಿಂಹಚಾರ್, ಎಲ್.ಗುಂಡಪ್ಪ, ಜಿ.ಪಿ.ರಾಜರತ್ನಂ, ಕ.ವೆಂ.ರಾಘವಾಚಾರ್, ಎನ್.ಅನಂತರಂಗಾಚಾರ್,

ಕೆ.ವೆಂಕಟರಾಮಪ್ಪ, ಡಿ.ಕೆ.ಭೀಮಸೇನರಾವ್, ಜಿ.ವೆಂಕಟಸುಬ್ಬಯ್ಯ, ಎಚ್.ಎಂ.ಶಂಕರ ನಾರಾಯಣರಾವ್, ಎಸ್.ವಿ.ಪರಮೇಶ್ವರಭಟ್ಟ, ಎಲ್.ಎಸ್.ಶೇಷಗಿರಿರಾವ್, ಎಂ.ವಿ. ಸೀತಾರಾಮಯ್ಯ, ಎಚ್.ಎಸ್. ದೊರೆಸ್ವಾಮಿ ಮೊದಲಾದವರು ಸೇರಿದ್ದಾರೆ.

ಶ್ರೀಯುವರ ಸಹೋದ್ಯೋಗಿಗಳಾಗಿ ಟಿ.ಎಸ್.ವೆಂಕಣ್ಣಯ್ಯ, ಕೆ.ರಾಘವಾಚಾರ್, ಡಿ. ಶ್ರೀನಿವಾಸಾಚಾರ್, ಟಿ.ಎನ್. ಸುಬ್ಬರಾಯಶಾಸ್ತ್ರಿ, ಸಿ.ಆರ್.ನರಸಿಂಹಶಾಸ್ತ್ರಿ, ಆರ್.ಅನಂತಕೃಷ್ಣಶರ್ಮ ಮುಂತಾದವರಿದ್ದರು. ಅವರೆಲ್ಲರ ಅನುಭವಧಾರೆ ಅಂದಿನ ವಿದ್ಯಾರ್ಥಿಗಳಿಗೆ ಧಾರಾಳವಾಗಿ ದೊರೆಯಿತು. ಬಿ.ಎಂ. ಶ್ರೀಯವರು ಅಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ, ಸಾಹಿತಿಯಾಗಿ ಸಾಹಿತಿಗಳಿಗೆ, ನಾಡು ನುಡಿ ಭಕ್ತರಾಗಿ ಕನ್ನಡಿಗರಿಗೆ ನೀಡಿದಸ್ಫೂರ್ತಿ ಅಷ್ಟಿಷ್ಟಲ್ಲ. ಅಂದಾಗಲೀ ಇಂದಾಗಲೀ ಕನ್ನಡ ನಾಡು ನುಡಿ ಸಂಸ್ಕೃತಿ ನಿರ್ಮಾಣದಲ್ಲಿ ಅವರ ಸ್ಮರಣೆ ನಿತ್ಯನೂತನವಾಗಿದೆ; ಅಮರ ಸಂದೇಶವಾಗಿದೆ.

ಬಿ.ಎಂ.ಶ್ರೀಯವರು ಕಲಬುರ್ಗಿಯಲ್ಲಿ ನಡೆದ ಹದಿನಾಲ್ಕನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಪಾಂಡಿತ್ಯಪೂರ್ಣವಾದ ಭಾಷಣ ಮಾಡಿದರು (೧೯೨೮). ಅವರ ಅಧ್ಯಕ್ಷ ಭಾಷಣದಲ್ಲಿ ಅವರ ಅಪ್ಪಟ ಕನ್ನಡತನ ರಾರಾಜಿಸಿದೆ. ಅವರು ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ವಿಶ್ವವಿದ್ಯಾಲಯ ಕನ್ನಡ ಗ್ರಂಥಮಾಲೆಯ ಪ್ರಧಾನ ಸಂಪಾದಕರಾಗಿದ್ದರು (೧೯೩೧). ಪುತ್ತೂರು ದಸರಾ ಸಾಹಿತ್ಯ ಸಮ್ಮೇಳದ ಅಧ್ಯಕ್ಷರಾಗಿದ್ದರು (೧೯೩೪). ಬಿ.ಎಂ.ಶ್ರೀಯವರು ಕನ್ನಡ ಸಾಹಿತ್ಯ ಪರಿಷತ್ತಿಗೆ ಅಮೋಘ ಸೇವೆಸಲ್ಲಿಸಿದ್ದು ಪ್ರತ್ಯೇಕ ಉಲ್ಲೇಖಕ್ಕೆ ಅರ್ಹವಾಗಿದೆ (೧೯೩೮–೪೩).

ಅವರು ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದರು. ತಮ್ಮ ಅವಧಿಯಲ್ಲಿ 'ಕನ್ನಡನುಡಿ' ಪತ್ರಿಕೆಯನ್ನು ಪ್ರಾರಂಭಿಸಿದರು. ಕನ್ನಡ ಸಾಹಿತ್ಯ ಪರೀಕ್ಷೆಗಳನ್ನು ಏರ್ಪಾಡು ಮಾಡಿದರು. ಮಹಿಳಾ ಗೋಷ್ಠಿಯನ್ನೂ ಮಕ್ಕಳ ಕೂಟವನ್ನೂ

ಸ್ಥಾಪಿಸಿದರು. ಸ್ವತಃ ಧನ ಸಹಾಯಮಾಡಿ ಅಚ್ಚುಕೂಟ ಆರಂಭಿಸಿದರು. ಅದು "ಬಿ.ಎಂ.ಶ್ರೀಕಂಠಯ್ಯ ಅಚ್ಚುಕೂಟ" ಎಂಬ ಹೆಸರಿನಿಂದ ಈಗಲೂ ಕೆಲಸ ಮಾಡುತ್ತಿದೆ.

ಬಿ.ಎಂ.ಶ್ರೀಯವರು ತಮ್ಮ ಅಗಾಧ ಪಾಂಡಿತ್ಯ ಹಾಗೂ ವೈಯಕ್ತಿಕ ವರ್ಚಸ್ಸಿನಿಂದ, ತಿರುಪತಿಯಲ್ಲಿ ನಡೆದ ಪ್ರಾಚ್ಯ ವಿದ್ಯಾ ಸಮ್ಮೇಳನದ ಕನ್ನಡ ವಿಭಾಗದ ಅಧ್ಯಕ್ಷರಾಗಿ (೧೯೪೦) ; ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ (೧೯೪೨) ಸೇವೆ ಸಲ್ಲಿಸಿ; ಆ ಸ್ಥಾನಗಳಿಗೆ ಗೌರವ ತಂದುಕೊಟ್ಟರು. 'ಪ್ರಬುದ್ಧಕರ್ನಾಟಕ' ಪತ್ರಿಕೆಯ ಸಂಪಾದಕ ಮಂಡಲಿಯ ಸದಸ್ಯರಾಗಿ; ಮೈಸೂರು ಮಹಾರಾಜ ಕಾಲೇಜು ಕರ್ನಾಟಕ ಸಂಘ ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಅಧ್ಯಕ್ಷರಾಗಿ ವಿದ್ಯಾರ್ಥಿ ಸಮೂಹದಲ್ಲಿ, ಅಧ್ಯಾಪಕ ವೃಂದದಲ್ಲಿ ಕನ್ನಡ ಜಾಗೃತಿಯನ್ನುಂಟು ಮಾಡಿದರು. ಭಕ್ತಿ ಗೌರವದ ರಾಜನಿಷ್ಠೆಯನ್ನುಳ್ಳವರಾಗಿದ್ದ ಬಿ. ಎಂ. ಶ್ರೀಯವರಿಗೆ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ 'ರಾಜಸೇವಾಸಕ್ತ' ಬಿರುದು ನೀಡಿ ಸನ್ಮಾನಿಸಿ, ಗೌರವಿಸಿದರು (೧೯೩೮).

ಶ್ರೀಕಂಠಯ್ಯನವರು 'ಶ್ರೀ' ಮತ್ತು 'ಬಿ.ಎಂ.ಶ್ರೀ' ಎಂಬ ಎರಡು ಕಾವ್ಯನಾಮಗಳಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದರು. ಸದಾ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುತ್ತಾ, ಇಂಗ್ಲಿಷ್ ಭಾಷೆಯಲ್ಲಿ ವ್ಯವಹರಿಸುತ್ತಾ, ಇಂಗ್ಲಿಷ್ ಭಾಷೆಯಲ್ಲಿ ಬೋಧಿಸುತ್ತಾ ಜೀವನವೆಲ್ಲ ಇಂಗ್ಲಿಷ್‌ಮಯವೋ ಎಂಬಂತೆ ಬದುಕುತ್ತಿದ್ದ ಬಿ. ಎಂ. ಶ್ರೀಕಂಠಯ್ಯ ನವರು; ಯಾವುದೋ ಮಾಯೆಯಲ್ಲಿ ಕನ್ನಡ ಭಾಷೆಯ ಕಡೆಗೆ ವಾಲಿ ಕನ್ನಡವನ್ನು ಕಲಿತು, ಕನ್ನಡಮ್ಮನ ಕೃಪೆಗೆ ಪಾತ್ರರಾಗಿ, ಕನ್ನಡ ಭಾಷೆಯಲ್ಲಿ ಅಪೂರ್ವ ಗ್ರಂಥ ರಚನೆಮಾಡಿ, ಕನ್ನಡ ನಾಡು ನುಡಿ ಸಂಸ್ಕೃತಿಯ ಏಳಿಗೆಗಾಗಿ ಬದ್ಧಕಂಕಣರಾಗಿ, ಪರಿವರ್ತನೆಯಾದುದು ದಿವ್ಯವಿಸ್ಮಯವಾಗಿದೆ. ಅವರ ನಾಡು ನುಡಿ ಸೇವೆ, ಸಾಹಿತ್ಯ ಸೃಷ್ಟಿ ಅನುಪಮವಾಗಿದೆ, ಆದರ್ಶವಾಗಿದೆ, ಅನುಕರಣೀಯವಾಗಿದೆ, ಇಂದಿಗೂ ಪಕನ್ನಡ "ತಾಯಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರಯಾತ್ರೆಯಲಿ" ಕನ್ನಡ ಕೈಂಕರ್ಯವನ್ನು ಕೈಕೊಂಡು,ತಾಜಾ ಕನ್ನಡತನವನ್ನು ಮೈದುಂಬಿಕೊಂಡು, ಕನ್ನಡ "ಚೆಲುವನು

ಸವಿವ ಮಗುವಾರು ತಣಿಯದನು, ಹಾಡಿ ಕುಣಿಯದನು, ಭಕ್ತಿಯಲಿ ತಲೆಬಾಗಿ ಮಣಿಯದನು?" ಎಂಬ ಚಿರಸತ್ಯವನ್ನು ಸಾರಿ, ಮನಸಾರೆ ಹಾಡಿ, ಕನ್ನಡ ಕುಲಕೋಟಿಯ ಮೈಮನವನ್ನು ಸೂರೆಗೊಂಡ ಆಚಾರ್ಯ ಬಿ.ಎಂ.ಶ್ರೀಯವರು ಕನ್ನಡಿಗರ ಪಾಲಿಗೆ ಪ್ರಾತಃಸ್ಮರಣೀಯ ರಾಗಿದ್ದಾರೆ.

ಬಿ.ಎಂ.ಶ್ರೀಯವರು ಬದುಕಿದ್ದಾಗ ಮತ್ತು ಅವರು ಕಣ್ಮರೆಯಾದ ಮೇಲೆ ಪ್ರಕಟವಾದ ಅವರ ಗ್ರಂಥಗಳು ಹೀಗಿವೆ: ಇಂಗ್ಲಿಷ್ ಗೀತಗಳು(೧೯೨೧), ಗದಾಂಯುದ್ಧ ನಾಟಕಂ (೧೯೨೬), ಅಶ್ವತ್ಥಾಮನ್(೧೯೨೯), ಪಾರಸಿಕರು (೧೯೩೫), ಕನ್ನಡ ಛಂದಸ್ಸಿನ ಚರಿತ್ರೆ (ಕನ್ನಡ ಕೈಪಿಡಿ ಭಾಗ ೧ರಲ್ಲಿ- ೧೯೩೬), ಕನ್ನಡ ಬಾವುಟ(ಸಂಪಾದಿತ-೧೯೩೮), ಹೊಂಗನಸುಗಳು (೧೯೪೩), ಕನ್ನಡ ಸಾಹಿತ್ಯ ಚರಿತ್ರೆ (ಕನ್ನಡ ಕೈಪಿಡಿ ಭಾಗ ೨ ರಲ್ಲಿ-೧೯೪೭), ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ(೧೯೪೮), ಕನ್ನಡ ಭಾಷೆಯ ವಿಚಾರಗಳು (೧೯೧೩), ಇಸ್ಲಾಂ ಸಂಸ್ಕೃತಿ (ಮಹಮ್ಮದ್ ಅಬ್ಬಾಸ್ ಷೂಸ್ತ್ರಿ ಅವರ ಗ್ರಂಥದ ಅನುವಾದ -೧೯೪೮), ಶ್ರೀಸಾಹಿತ್ಯ (ಸಮಗ್ರ ಕೃತಿ ಸಂಪುಟ-೧೯೮೩) ಮತ್ತು A Hand Book of Rhetoric(1919).

ಬಿ.ಎಂ.ಶ್ರೀಯವರ "ಇಂಗ್ಲಿಷ್ ಗೀತಗಳು" ಕನ್ನಡ ನವೋದಯ ಕಾವ್ಯದ ಆಚಾರ್ಯ ಕೃತಿ. ಕನ್ನಡ ಕಾವ್ಯ ಪರಂಪರೆಗೆ ಹೊಸಬೆಳೆ ಹೊಸಕಳೆ ತಂದುಕೊಟ್ಟ ಕೃತಿ. ಅನುವಾದ ರೀತಿಗೆ ಮಾದರಿ ಕೃತಿ. ಅದರ ಪ್ರಭಾವಕ್ಕೆ ಒಳಗಾಗದವರಿಲ್ಲ. ಎಸ್.ಅನಂತನಾರಾಯಣರು ಗುರುತಿಸಿದಂತೆ ಇದು "ಸಮಗ್ರ ಹೊಸತನವನ್ನು ಮೈಗೂಡಿಸಿಕೊಂಡು ತುಂಬಿಕೊಂಡು ಬಂದ ಕೃತಿ". ಈ ಗ್ರಂಥದ ಪ್ರಶಂಸೆಗೆ ಹಲವು ಕಾರಣಗಳಿವೆ: "ಶ್ರೀ ಅವರ ಇಂಗ್ಲಿಷ್ ಗೀತಗಳು ಕನ್ನಡ ಸಾಹಿತ್ಯಕ್ಕೆ ಸಾಗರದಾಚೆಯಿಂದ ಹೊಸತನವನ್ನು ತಂದುಕೊಟ್ಟ ಗ್ರಂಥ. ಜಿಡ್ಡು ಹಿಡಿದು ಜಡ್ಡು ಕಟ್ಟಿ- ಹೋಗಿದ್ದ ಕನ್ನಡ ಭಾಷೆಗೆ ಹೊಸಗನ್ನಡದ ರೂಪ ತಂದುಕೊಟ್ಟ ಗ್ರಂಥ. ಕನ್ನಡದಲ್ಲಿ

ಭಾವಗೀತೆಗಳ ಅಂಕವನ್ನು ಆರಂಭಿಸಿದ ಗ್ರಂಥ. ಕನ್ನಡದ ಬರಹಗಾರರಲ್ಲೂ ಓದುಗರಲ್ಲೂ ಹೊಸ ಚಿಂತನಶೀಲತೆಯನ್ನು ಹುರಿದುಂಬಿಸಿದ ಗ್ರಂಥ. ಕನ್ನಡ ಕಾವ್ಯದಲ್ಲಿ ಹೊಸಗನ್ನಡದ ಮೊದಲ ಅಧ್ಯಾಯವನ್ನು ತೆರೆದಿಟ್ಟ ಗ್ರಂಥ" ಎಂದಿರುವ ಚಿ.ನ. ಮಂಗಳಾ ಅವರ ಅಭಿಪ್ರಾಯದಲ್ಲಿ ಸತ್ಯವಿದೆ. "ಹುಟ್ಟಿದೊಡನೆ ಮಕುಟ ರತ್ನದಂತೆ ಕನ್ನಡದಲ್ಲಿ ಹೊಳೆಯತೊಡಗಿದ ಕೆಲವೇ ಕೃತಿಗಳಲ್ಲಿ ಇಂಗ್ಲಿಷ್ ಗೀತಗಳೂ ಒಂದು" ಎಂದು ವಿ.ಕೃ.ಗೋಕಾಕ್ ಸ್ಪಷ್ಟಪಡಿಸಿದ್ದಾರೆ.

'ಹೊಂಗನಸುಗಳು' ಶ್ರೀಯವರ ವೈವಿಧ್ಯಮಯ ಕಾವ್ಯ ಪ್ರಯೋಗಕ್ಕೆ, ನಾಡು ನುಡಿ ಪ್ರೇಮದ ಅಭಿವ್ಯಕ್ತಿಗೆ, ರಾಜಭಕ್ತಿ, ದೇಶಭಕ್ತಿ, ಸಾರ್ವಭೌಮತ್ವದ ಗೌರವಕ್ಕೆ ಸಾಕ್ಷಿಯಾಗಿರುವ ಕವಿತೆಗಳಾಗಿವೆ. ಈ ಸ್ವತಂತ್ರ ಕವಿತೆಗಳ ವಸ್ತು ವಿಷಯಗಳ ಪ್ರಸ್ತುತತೆಯ ಬಗೆಗೆ ಭಿನ್ನಾಭಿ- ಪ್ರಾಯವಿದ್ದರೂ ಶ್ರೀಯವರು ಮೊದಲಬಾರಿಗೆ ಪ್ರಗಾಥ ಪದ್ಯ ರಚನೆಮಾಡಿ ಆದ್ಯರೆನಿಸಿದುದಕ್ಕೆ ಉದಾಹರಣೆಗಳು ಇಲ್ಲಿವೆ. 'ಗದಾಯುದ್ಧ ನಾಟಕಂ' ಎಂಬುದು, ಕಾವ್ಯದ ಉದ್ದಕ್ಕೂ ಲವಲವಿಕೆಯ ನಾಟಕೀಯತೆಯನ್ನು ತುಂಬಿಕೊಂಡಿರುವ ರನ್ನ ಮಹಾಕವಿಯ 'ಸಾಹಸಭೀಮ ವಿಜಯಂ' ಮಹಾಕಾವ್ಯದ ಸಾರರೂಪ ನಾಟಕ.ಇದರಲ್ಲಿ ದುರಂತನಾಟಕದಛಾಯೆಯಿದೆ. ಗ್ರೀಕ್‌ಭಾಷೆಯ ಸೊಫೊಕ್ಲಿಸ್ ಮಹಾನಾಟಕಕಾರನ 'ಏಜಾಕ್ಸ್' ನಾಟಕದಿಂದ ಸ್ಫೂರ್ತಿ ಪಡೆದು ರೂಪಾಂತರದ ರಚನೆಯಾಗಿ ಹುಟ್ಟಿದ 'ಅಶ್ವತ್ಥಾಮನ್' ನಾಟಕ ಕನ್ನಡ ಸಾಹಿತ್ಯದಲ್ಲಿ ಉಂಟುಮಾಡಿದ ತಲ್ಲಣ ಅಷ್ಟಿಷ್ಟಲ್ಲ. ಅದು ಕನ್ನಡದ ಮೊತ್ತಮೊದಲ ದುರಂತನಾಟಕವೂ ಹೌದು. ಅಶ್ವತ್ಥಾಮನ್ ಮೂಲ ಗ್ರೀಕ್‌ನಾಟಕದ 'ಪ್ರತಿಕೃತಿ' ಯಲ್ಲ; 'ಪ್ರತಿಮಾಕೃತಿ'.

ಭಾರತೀಯ ಪರಂಪರೆಯ ಸಂಪ್ರದಾಯಸ್ಥ ಸಹೃದಯರಿಗೆ ಈ ನಾಟಕ ದಿಗ್ಭ್ರಮೆ ಹುಟ್ಟಿಸಿತು. "ಈ ಕೃತಿ ರಂಗಭೂಮಿಯಲ್ಲಿ ಜೀವಂತವಾಗಿರಲು ಅಸಾಧ್ಯವಾಗಿದ್ದರೂ ಓದುಗನಿಗೆ ಹಿತವನ್ನು ಉಂಟುಮಾಡಬಲ್ಲ ಕೃತಿಯಾಗಿ ಇಂದಲ್ಲ ನಾಳೆಗೂ ಉಳಿಯ ಬಲ್ಲುದಾಗಿವೆ" ಎಂದು ಪ್ರೊ.ಕ.ವೆಂ. ರಾಜಗೋಪಾಲರು ವಿಶ್ಲೇಷಿಸಿದ್ದಾರೆ.

ಮತ್ತೊಬ್ಬ ಗ್ರೀಕ್ ನಾಟಕಕಾರ ಈಸ್ಕಿಲಸನ 'ಪರ್ಸೆ' ಎಂಬ ನಾಟಕದ ಭಾಷಾಂತರಕೃತಿ 'ಪಾರಸಿಕರು' ನಾಟಕ. ಇದರಲ್ಲಿ ಗಂಭೀರವಾದ ಶೈಲಿಯಿದೆ; ನಾಟಕೀಯತೆಗಿಂತ ಹೆಚ್ಚಾಗಿ ಕಾವ್ಯವಿದೆ. ಇದರಲ್ಲಿ ಉದಾತ್ತಪಾತ್ರ, ಉತ್ತಮಕ್ರಿಯೆ ಇಲ್ಲದಿದ್ದರೂ ಶ್ರೀಯವರು ತನ್ಮಯರಾಗಿ ಭಾಷಾಂತರಿಸಿದ್ದಾರೆ. ಹಳಗನ್ನಡ ಕಾವ್ಯಶೈಲಿಯನ್ನು ತಮ್ಮ ನಾಟಕಗಳಿಗೆ ಬಳಸಿಕೊಳ್ಳುವುದರ ಮೂಲಕ, ಶ್ರೀಯವರು ಒಂದು ಹೊಸಶೈಲಿಗೆ ನಾಂದಿ ಹಾಡಿರುವುದು ಪ್ರಧಾನವಾಗಿ ಕಾಣುತ್ತದೆ.

ಬಿ.ಎಂ.ಶ್ರೀಯವರು ಸೃಜನಶೀಲ ಸಾಹಿತ್ಯಕ್ಕಿಂತ ಹೆಚ್ಚಾಗಿ, ಜಗತ್ತಿನ ಉತ್ತಮಸಾಹಿತ್ಯವನ್ನು ಕನ್ನಡ ಭಾಷೆಗೆ ಅನುವಾದಿಸುವುದರ ಮೂಲಕ, ಕನ್ನಡ ಸರಸ್ವತಿಯನ್ನು ಅಲಂಕರಿಸಿದರು, ಕನ್ನಡಸಾಹಿತ್ಯ ಲೋಕವನ್ನು ಸಮೃದ್ಧಿ ಗೊಳಿಸಿದರು. ಕನ್ನಡದ ಜಾಯಮಾನಕ್ಕೆ ಒಗ್ಗುವಂಥ ಅನುವಾದವೂ ಕೂಡ ಪವಿತ್ರಕಾರ್ಯವೆಂದು ಭಾವಿಸಿದರು. ಆ ಮೂಲಕವೇ ಕನ್ನಡ ನವ್ಯೋದಯ ಕಾವ್ಯದ ಪ್ರವರ್ತಕರಾದರು. ಭಾರತದ ವಿದ್ಯೆ ಹಾಗೂ ಪಶ್ಚಿಮದ ವಿದ್ಯೆಯನ್ನು ಕೂಡಿಸಿಕೊಂಡು, ಕನ್ನಡ ಸಾರಸ್ವತ ಕ್ಷೇತ್ರ ಬೆಳೆಯಬೇಕೆಂಬುದರ ಕಡೆಗೆ ಬಿ.ಎಂ. ಶ್ರೀಯವರಿಗೆ ಒಲವು.

ಬಿ.ಎಂ.ಶ್ರೀಕಂಠಯ್ಯನವರ ಅಗಾಧವಾದ ವಿದ್ವತ್ತಿಗೆ, ಬಹುಭಾಷಾ ತಿಳುವಳಿಕೆಗೆ, ಹೊಸಗನ್ನಡ ಛಂದಸ್ಸಿನ ಪರಿಕಲ್ಪನೆಗೆ, ಸಾಹಿತ್ಯ ಚರಿತ್ರೆಯ ರೀತಿಗೆ, ಭಾಷಣದ ವೈಖರಿಗೆ, ಕನ್ನಡ ನಾಡು ನುಡಿ ನಿಷ್ಠೆಗೆ, ಗ್ರಂಥ ಸಂಪಾದನೆಯ ಅಚ್ಚುಕಟ್ಟುತನಕ್ಕೆ, ಪ್ರೋತ್ಸಾಹದಾಯಕ ಸಮೀಕ್ಷೆಗೆ, ರಸಮಯ ಕಾವ್ಯ ಮೀಮಾಂಸೆಗೆ, ಜನಪದ ಗೀತೆಯ ರಸಾಸ್ವಾದನೆಗೆ, ಕನ್ನಡ ಲಿಪಿಸುಧಾರಣೆಗೆ ಗಮನ ಸೆಳೆಯಲು ಅವರ ಇತರ ಗ್ರಂಥಗಳು, ಲೇಖನಗಳು ಮುಂದಾಗುತ್ತವೆ. ಈ ಸಾಲಿಗೆ ಶ್ರೀಯವರ ಇಂಗ್ಲಿಷ್ ಬರಹಗಳೂ ಸೇರುತ್ತವೆ. ಕನ್ನಡದ ಪುನರುಜ್ಜೀವನ, ಹೊಸ ಸಾಹಿತ್ಯಸೃಷ್ಟಿಯ ಚಿಂತನ ಅವರ ಬರಹಗಳಲ್ಲಿ ವಿಶೇಷವಾಗಿ ಗೋಚರಿಸುತ್ತದೆ. ಬಿ.ಎಂ.ಶ್ರೀಯವರು ಸುಮಾರು ಒಂದು ಸಾವಿರ ಪುಟದಷ್ಟು ಸಾರವತ್ತಾದ ಸಾಹಿತ್ಯವನ್ನು ಓದುಗರಿಗೆ ನೀಡಿದ್ದಾರೆ.

ಬಿ.ಎಂ.ಶ್ರೀಯವರಿಗೆ ಕನ್ನಡ ನಾಡು ನುಡಿ ಸಾಹಿತ್ಯ ಸಂಸ್ಕೃತಿ ಜೀವನದ ಉಸಿರಾಯಿತು, ಮನಸ್ಸಿನ ಮಂತ್ರವಾಯಿತು. "ಕನ್ನಡದ 'ಹುಚ್ಚು' ಅವರಿಗೆ ಹಿಡಿದಿರುವಷ್ಟು ಹಿಂದೆ ಮತ್ತೆ ಯಾರಿಗೂ ಹಿಡಿದಿರಲಿಲ್ಲ" ಎಂದು ಬೆಳ್ಳಾವೆ ವೆಂಕಟನಾರಣಪ್ಪನವರು ನುಡಿದಿದ್ದಾರೆ. "ಶ್ರೀಕಂಠಯ್ಯನವರ 'ಕಂಠಶ್ರೀ' ಇತರರಿಗಿಲ್ಲ" ಎಂದು ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು ಷರಾ ಬರೆದಿದ್ದಾರೆ. ಶ್ರೀಯವರು ವಾಕ್‌ಶ್ರೀಯುತರು, ವಾಕ್ಕೋವಿದರು, ವಾಗ್ವೈಭವಶಾಲಿಗಳು" ಎಂಬುದು ಎಸ್.ವಿ. ರಂಗಣ್ಣನವರ ಉದ್ಗಾರ."ಅವರು ತೋರಿಸಿದ್ದೇ ಒಳ್ಳೆಯದಾರಿ"ಎಂಬುದು ಡಿ.ವಿ.ಗುಂಡಪ್ಪನವರ ನಂಬಿಕೆ. "ಶ್ರೀಯವರು ಮಾರ್ಗದರ್ಶಿಗಳು, ಮಾರ್ಗಕಾರರು" ಎಂಬುದು ದ.ರಾ.ಬೇಂದ್ರೆಯವರ ಕವಿವಾಣಿ. ಶ್ರೀಯವರು ಕನ್ನಡ ಮಾತೆಗೆ ಒಂದು ತೇಜಸ್ಸನ್ನು ಓಜಸ್ಸನ್ನು ಕೊಟ್ಟರು" ಎಂಬುದು ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರ ಅಭಿಪ್ರಾಯ. ಮಾಸ್ತಿಯವರ ಪ್ರಕಾರ ಶ್ರೀಯವರು "ಕನ್ನಡಕ್ಕೆ ಕಣ್ವಮುನಿ". ಕುವೆಂಪುರವರು "ಕನ್ನಡ ಸಾಹಿತ್ಯ ನವೋದಯಕ್ಕೆ ನಾಂದೀ ಸ್ವರೂಪರಾದವರು" ಎಂದು ಶ್ರೀಯವರನ್ನು ಕೊಂಡಾಡಿರುವುದು ಉತ್ಪ್ರೇಕ್ಷೆಯಲ್ಲ. ಶ್ರೀಕಂಠಯ್ಯನವರಂಥವರು ದೇಶಕ್ಕೇ ಭೂಷಣ, ದೊಡ್ಡಭಾಗ್ಯ" ಎಂಬುದು ಜ.ವಾಸುದೇವಯ್ಯನವರ ಅಂಬೋಣ. ಬಿ.ಎಂ.ಶ್ರೀಕಂಠಯ್ಯನವರ ಬದುಕು ಬರಹವನ್ನು ಕುರಿತು ಡಾ. ಹಾ.ಮಾ. ನಾಯಕರು ಹೀಗೆ ವ್ಯಾಖ್ಯಾನಿಸಿದ್ದಾರೆ: "ಕನ್ನಡದಲ್ಲಿ ಕೆಲಸ ಮಾಡುವ ಯಾರಿಗಾದರೂ ಬಿ.ಎಂ.ಶ್ರೀಕಂಠಯ್ಯನವರ ನೆನಪು ಬತ್ತದ ಕಾರಂಜಿ; ಮುಗಿಯದಗಣಿ; ಸ್ಫೂರ್ತಿಯಸ್ರೋತ; ಶಕ್ತಿಯ ಆಗರ". "ಯುಗಪ್ರವರ್ತಕ ಎಂಬ ಹೆಸರಿಗೆ ಮಾಡಿಟ್ಟ ವ್ಯಕ್ತಿ ಬಿ.ಎಂ.ಶ್ರೀಕಂಠಯ್ಯ ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯಕ್ಕೆ ಅವರು ಅಡಿಗಲ್ಲು; ಸ್ತಂಭ, ದೀಪ, ಕೈಮರ."

ಬಿ.ಎಂ.ಶ್ರೀಕಂಠಯ್ಯನವರು ಬರೆದದ್ದು ಕಡಮೆ. ಆದರೆ ಅವರು ಬರೆದದ್ದೆಲ್ಲವೂ ಅಪ್ಪಟ ಚಿನ್ನ. ಅವರ ಕಾವ್ಯ, ನಾಟಕ, ಗದ್ಯಬರಹ, ಉಪನ್ಯಾಸ ಅನುಕರಣೀಯವಾದದ್ದು. ಅವರು ನಿರ್ಮಿಸಿದ ಸಾಹಿತ್ಯಕ ಹೆದ್ದಾರಿ, ಮುಂದಿನವರಿಗೆ ಸುಗಮದಾರಿ. ಹಳಗನ್ನಡ, ನಡುಗನ್ನಡ, ಆಧುನಿಕ ಕನ್ನಡಗಳಲ್ಲಿ ಅವರದು ಸಮಾನಪರಿಣತಿ. ಬರಹದಲ್ಲಾಗಲೀ ಮಾತಿನಲ್ಲಾಗಲೀ ಅವರ

ಕನ್ನಡ ಇಂಗ್ಲಿಷ್ ಭಾಷೆಗಳೆಡರಲ್ಲೂ ಸಮಾನವಾದ ಹದ. ಮಹಾಕೃತಿಗಳ ರಚನೆಯಲ್ಲಿ ಅವರದೇ ಆದ ವಿಶಿಷ್ಟ ಶೈಲಿ ಇರಬೇಕು ಎಂಬುದರ ಕಡೆಗೆ ಬಿ.ಎಂ.ಶ್ರೀಯವರಿಗೆ ಹೆಚ್ಚು ಒಲವು.

ವರ್ತಮಾನದಲ್ಲಿದ್ದು ಬರೆದರೂ ಮಹಾಕೃತಿಗಳ ಶೈಲಿ ಪ್ರಾಚೀನ ರೂಪದಲ್ಲಿದ್ದರೆ ಅರ್ಥಪೂರ್ಣ ಎಂಬುವರತ್ತ ಅವರ ನಂಬಿಕೆ ಇದ್ದಂತೆ ಭಾಸವಾಗುತ್ತದೆ. ಅವರ ಶಿಷ್ಯರಲ್ಲೂ ಅದೇ ಭಾವನೆಯನ್ನು ಮೂಡಿಸಿದರು. ಸೃಜನಶೀಲ ಪ್ರತಿಭೆಯ ಶಿಷ್ಯರು ಗುರುವಿನ ಆಣತಿಯನ್ನು ಚಚು ತಪ್ಪದೆ ಪಾಲಿಸಿದರು. ಬಿ.ಎಂ.ಶ್ರೀ ಯವರ ಕಾವ್ಯಶೈಲಿ ಮುಂದಿನ ಕನ್ನಡ ಕಾವ್ಯಸೃಷ್ಟಿಗೆ ಮಾರ್ಗದರ್ಶಿಯಾಯಿತು ಎಂಬುದು ಸುಳ್ಳಲ್ಲ.

ಬಿ.ಎಂ.ಶ್ರೀಯವರು ಕನ್ನಡನಾಡಿನಲ್ಲೆಲ್ಲಾ ಸುತ್ತಾಡಿ, ನಿರರ್ಗಳವಾಗಿ ಮಾತನಾಡಿ, ಕನ್ನಡ ನಾಡು ನುಡಿ ಸಂಸ್ಕೃತಿಯ ಪ್ರಚಾರಮಾಡಿದರು; ಕನ್ನಡಿಗರ ಎದೆಯಲ್ಲಿ ಅಚ್ಚಳಿಯದ ಪ್ರಭಾವ ಬೀರಿದರು. ಅವರು ತಮ್ಮನ್ನು 'ಕನ್ನಡದ ಕಾವಲುನಾಯಿ' ಎಂದೂ 'ಕನ್ನಡ ತಾಯಿಗಾಗಿ ಭಿಕ್ಷೆಬೇಡುವ ದಾಸಯ್ಯ ನಾನು' ಎಂದೂ ಕರೆದುಕೊಳ್ಳುತ್ತಿದ್ದರು. "ಕನ್ನಡ ನಾಡಿಗೆ ಕನ್ನಡವೇ ಗತಿ ಅನ್ಯಥಾ ಶರಣಂ ನಾಸ್ತಿ. ಸಂಸ್ಕೃತವಲ್ಲ ಇಂಗ್ಲಿಷಲ್ಲ ಹಿಂದಿಯಲ್ಲ, ಕನ್ನಡ" ಎಂದು ಮತ್ತೆ ಮತ್ತೆ ಹೇಳುತ್ತಿದ್ದರು.

ಶ್ರೀಯವರ ಕನ್ನಡನಿಷ್ಠೆ ಅಕಳಂಕವಾದದ್ದು, ಅಪರೂಪವಾದದ್ದು. ಬಿ.ಎಂ.ಶ್ರೀಕಂಠಯ್ಯ ನವರ ಆಪ್ತಶಿಷ್ಯರು, ಅಭಿಮಾನಿಗಳು ಅನನ್ಯವಾಗಿ ತಮ್ಮ ಗುರುಋಣವನ್ನು ತೀರಿಸಿದ್ದಾರೆ. ಶ್ರೀಯವರಿಗೆ ಅರ್ಪಿಸಿದ 'ಸಂಭಾವನೆ' ಗ್ರಂಥ ಚರಿತ್ರಾರ್ಹವಾಗಿದೆ (೧೯೪೧). ಅದು ಕನ್ನಡದ ಮೊತ್ತಮೊದಲ ಅಭಿನಂದನ ಗ್ರಂಥವಾಯಿತು. ಅವರನ್ನು ಕುರಿತು ಬರೆದಿರುವ ಜೀವನ ಚರಿತ್ರೆ, ಪ್ರಶಂಸಾರ್ಹ ಲೇಖನ, ವಿಮರ್ಶೆ--ಮೊದಲಾದವೂ ಸಾಕಷ್ಟು ಪ್ರಕಟವಾಗಿವೆ. ಬಿ.ಎಂ.ಶ್ರೀ ಸಂಸ್ಮರಣಾ ಸಂಸ್ಥೆಗಳೂ ಸ್ಮಾರಕಗಳೂ ಇವೆ. ಬಿ.ಎಂ.ಶ್ರೀಯವರನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಗೌರವಿಸುವುದರ ಮೂಲಕ ಅಖಂಡ ಕರ್ನಾಟಕದ ಕನ್ನಡಿಗರು ತಮ್ಮನ್ನು ತಾವೇ ಗೌರವಿಸಿ ಕೊಂಡಂತಾಗಿದೆ.

ಬಿ.ಎಂ. ಶ್ರೀಯವರು ವೈಯಕ್ತಿಕ ಬದುಕಿನಲ್ಲಿ ಸಾಕಷ್ಟು ಸಂಕಟವನ್ನು ಅನುಭವಿಸಿದರು. ಅವರ ಹೆಂಡತಿ ಬಹಳ ಬೇಗ ನಿಧನರಾದರು. ಅವರ ಅಳಿಯ ಗುಂಡಪ್ಪ ಚಿಕ್ಕವಯಸ್ಸಿಗೆ ತೀರಿಕೊಂಡರು. ವಿಧವೆ ಮಗಳು ಮತ್ತು ಅವಳ ಮಕ್ಕಳ ಪೋಷಣೆ ಮಾಡಬೇಕಾಯಿತು. ಇದ್ದೊಬ್ಬ ಮಗ ಆಕಸ್ಮಿಕವಾಗಿ ಕಣ್ಣು ಕಳೆದುಕೊಂಡು ಶಾಶ್ವತ ಕುರುಡನಾದ. ಅವರ ಏಳಿಗೆಯನ್ನು ಸಹಿಸದವರ ಕಿರುಕುಳವೂ ಇತ್ತು. ಸಣ್ಣಪುಟ್ಟದ್ದಕ್ಕೆಲ್ಲಾ ಕ್ಷೋಭೆಗೊಳ್ಳುವ ಪರಿಸ್ಥಿತಿ ಉಂಟಾಗಿತ್ತು. ಅದನ್ನೆಲ್ಲಾ ಸಹಿಸಿಕೊಂಡು ಕನ್ನಡ ನಾಡು ನುಡಿ ಸಂಸ್ಕೃತಿಯ ಸರ್ವತೋಮುಖ ಏಳಿಗೆಗಾಗಿ ಜೀವನವನ್ನು ಮುಡುಪಿಟ್ಟರು. ಅದಕ್ಕಾಗಿ ಶಕ್ತಿಮೀರಿ ಶ್ರಮಿಸಿದರು. ಅವರ ಬದುಕು ಮತ್ತು ಬರಹ ಉದಾತ್ತವಾದದ್ದು; ಉಜ್ವಲವಾದದ್ದು.

ಬಿ.ಎಂ.ಶ್ರೀಯವರಿಗೆ ಅವರದೇ ಆದ ಗತ್ತು ಗಾಂಭೀರ್ಯ, ಶಿಸ್ತು ಸಂಯಮ, ವೇಷ ಭೂಷಣ, ಕಷ್ಟ ಸಹಿಷ್ಣುತೆ ಇತ್ತು. ಜೀವನದುದ್ದಕ್ಕೂ ವೈಯಕ್ತಿಕ ಬದುಕಿನ ವರ್ಚಸ್ಸಿಗೆ ಧಕ್ಕೆ ಬರದಂತೆ ನಡೆದುಕೊಂಡರು. ಸನಿಹಕ್ಕೆ ಹೋದವರ ಮೇಲೆಲ್ಲಾ ಅವರ ವ್ಯಕ್ತಿತ್ವ ಪ್ರಭಾವ ಬೀರುತ್ತಿತ್ತು.

ಕನ್ನಡದ ಸುಪ್ರಸಿದ್ಧ ಸಾಹಿತಿ ಎ.ಎನ್.ಮೂರ್ತಿರಾವ್ ಶ್ರೀಯವರನ್ನು ಕುರಿತು ಹೀಗೆ ಹೇಳಿದ್ದಾರೆ: "ನನ್ನ ದೃಷ್ಟಿಯಲ್ಲಿ ಅವರು ಪ್ರಥಮತ: ಅಧ್ಯಾಪಕರಲ್ಲ, ಭಾಷಣಕಾರರಲ್ಲ; ಇವೆರಡಕ್ಕಿಂತ ಹೆಚ್ಚಾಗಿ ಕವಿಗಳು. ಅದಕ್ಕಿಂತ ಹೆಚ್ಚಾಗಿ ಅವರು ಸೇನೆಯೊಂದರ ಸೇನಾನಿ, ಕ್ರಾಂತಿಯೊಂದರ ಕೇಂದ್ರ, ಪಂಥವೊಂದರ ಪ್ರವಾದಿ". ಬಿ.ಎಂ.ಶ್ರೀ ಯವರು ಏನೆಲ್ಲಾ ವಿಶೇಷಣಗಳಿಗೆ ಪಾತ್ರರಾಗುವಂತೆ ಬದುಕಿದವರು. ಅವರನ್ನು ಕಂಡು ಮಹಾಕವಿ ಕುವೆಂಪು ಒಮ್ಮೆ "ಬಿ.ಎಂ.ಶ್ರೀಯವರು ಕನ್ನಡದ ಅಮೃತ ಪುತ್ರರು" ಎಂದು ಅಂತ:ಕರಣ ಪೂರ್ವಕವಾಗಿ ಕೊಂಡಾಡಿದರು.

ಬಿ.ಎಂ.ಶ್ರೀಕಂಠಯ್ಯನವರ ಬರವಣಿಗೆಯಲ್ಲಿ ಇತಿ ಮಿತಿಗಳಿಲ್ಲದೇಯಿಲ್ಲ. ಅವರ ಜೀವಿತಾವಧಿ ಹಾಗೂ ಬರವಣಿಗೆಯ ಅವಧಿ ಸ್ವಾತಂತ್ರಪೂರ್ವಕ್ಕೆ ಸಂಬಂಧಿಸಿದೆ. ಶ್ರೀಯವರು ಸಾಹಿತ್ಯ ರಚನೆಗೆ ತೊಡಗಿದಾಗ, ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡೆಯುತ್ತಿತ್ತು. ಮಹಾತ್ಮ ಗಾಂಧೀಜಿಯವರ ನೇತೃತ್ವ

ವೈವಿಧ್ಯಮಯವಾದ ಚಳುವಳಿಗಳು ದೇಶದಲ್ಲೆಲ್ಲಾ ಹರಡಿದ್ದುವು. ಆದರೆ ಆ ಯಾವ ವಿದ್ಯಮಾನಗಳೂ ಬಿ.ಎಂ.ಶ್ರೀಯವರ ಪದ್ಯ ಸಾಹಿತ್ಯದಲ್ಲಾಗಲೀ ಗದ್ಯ ಸಾಹಿತ್ಯದಲ್ಲಾಗಲೀ ಕಂಡು ಬುರುವುದಿಲ್ಲ. ಬಿ.ಎಂ.ಶ್ರೀಯವರ ಮಹಾಪ್ರತಿಭೆ ದೇಶದ ಸ್ವಾತಂತ್ರ್ಯ ಹೋರಾಟವನ್ನು ಏಕೆ ಮರೆಯಿತು ಎಂಬುದಕ್ಕೆ ಸ್ಪಷ್ಟವಾದ ಕಾರಣಗೊತ್ತಿಲ್ಲ. ಒಂದೆರಡು ಕಡೆ ಸ್ವಾತಂತ್ರ್ಯ ಬಯಕೆಯ ಶಬ್ದಗಳು ಮೂಡಿದ್ದರೂ ಅವು ಗಟ್ಟಿದನಿಯಾಗಿಲ್ಲ. ಇದನ್ನು ಮರೆತೇ ಬಿ.ಎಂ.ಶ್ರೀ ಸಾಹಿತ್ಯವನ್ನು ಓದಬೇಕು.

ಬಿ.ಎಂ.ಶ್ರೀಯವರಿಗಿದ್ದ ರಾಜನಿಷ್ಠೆ, ಸಾರ್ವಭೌಮತ್ವ ಹೊಗಳಿಕೆಯ ಮಾತುಗಳೂ ವಾದವಿವಾದಕ್ಕೆ ಆಸ್ಪದ ನೀಡುತ್ತವೆ. ಮೈಸೂರು ಮಹಾರಾಜರು ಜನಾನುರಾಗಿಗಳೆಂದೋ ಸಾಹಿತ್ಯ, ಸಂಗೀತ, ಸಂಸ್ಕೃತಿ, ಕಲೆಗಳ ಪೋಷಕರೆಂದೋ ಬಿ.ಎಂಶ್ರೀ ಅವರು ಮಹಾರಾಜರನ್ನು ಹೊಗಳುವುದರ ಮೂಲಕ ತಮ್ಮ ರಾಜಭಕ್ತಿಯನ್ನು ಮೆರೆದಿದ್ದಾರೆ. ಜಗತ್ತಿನ ಸಂಪದ್ಭರಿತವಾದ ಸಾಹಿತ್ಯವನ್ನು ಸೂರೆಮಾಡಲು ಅವಕಾಶನೀಡಿದ ಇಂಗ್ಲಿಷ್ ಭಾಷೆಯ ವ್ಯಾಮೋಹದಿಂದಲೋ ಏನೋ, ಅದರ ವಾರಸುದಾರರಾದ ಸಾರ್ವಭೌಮರನ್ನು, ಅವರ ಅಧಿಕಾರವನ್ನು ಹೊಗಳಿದ್ದಾರೆ. ಹೀಗೇಕೆ ಎಂಬ ಪ್ರಶ್ನೆಗೆ ಸ್ಪಷ್ಟವಾದ ಸಮರ್ಥನೆಯಿಲ್ಲ.ಅಥವಾ ಸ್ವಾತಂತ್ರ್ಯಪೂರ್ವದಲ್ಲಿ ಇದಕ್ಕಿಂತ ಭಿನ್ನವಾಗಿ ಯೋಚಿಸುವ ಅಗತ್ಯ ಅವರಿಗೆ ಕಂಡುಬರಲಿಲ್ಲವೋ ಏನೋ. ಈ ಧೋರಣೆಗಳನ್ನೂ ಕೂಡ ಮರೆತು ಬಿ.ಎಂ.ಶ್ರೀಯವರ ಸಾಹಿತ್ಯವನ್ನು ಓದಬೇಕಾಗುತ್ತದೆ. ಈ ಇತಿಮಿತಿಗಳ ನಡುವೆಯೂಅವರು ಕನ್ನಡಕ್ಕೆ ಕೊಟ್ಟಿರುವ ಕೊಡುಗೆ ಅಪಾರವಾದುದು. ಅರವತ್ತೆರಡು ವರ್ಷ ಬದುಕಿದ್ದ ಬಿ.ಎಂ.ಶ್ರೀಕಂಠಯ್ಯ ಅವರು೧೯೪೬ನೇ ಜನವರಿ ಐದನೆಯ ತಾರೀಖಿನಂದು ಧಾರವಾಡದಲ್ಲಿ ನಿಧನರಾದರು. ಅವರು ತಮ್ಮ ಜೀವಿತಾವಧಿಯಲ್ಲಿ ಮಾಡಿದ ಸಾಧನೆ, ನೀಡಿದ ಸಂದೇಶ, ಬೀರಿದ ಪ್ರಭಾವ ಚಿರಸ್ಮರಣೀಯವಾಗಿದೆ. ೧೯೮೪ರಲ್ಲಿ ಅವರ ಜನ್ಮ ಶತಮಾನೋತ್ಸವವನ್ನು ಅದ್ದೂರಿಯಾಗಿ ಆಚರಿಸುವ ಮೂಲಕ ಕನ್ನಡ ಕುಲಬಾಂಧವರು ಶ್ರೀಯವರ ಆದರ್ಶಗಳನ್ನು ಮೈದುಂಬಿಕೊಂಡರು; ತಮ್ಮ ಜೀವನಪಥದಲ್ಲಿ ಸಾಕಾರಮಾಡಿಕೊಂಡರು.

ಕರ್ನಾಟಕ ಹಾಗೂ ಕನ್ನಡಿಗರ ಪಾಲಿಗೆ ಬಿ.ಎಂ.ಶ್ರೀಯವರು ಕೇವಲ ವ್ಯಕ್ತಿಯಲ್ಲ, ಅಕ್ಷಯ ಶಕ್ತಿ. ಅವರ ಸೃಜನಶೀಲ ಅಭಿವ್ಯಕ್ತಿಯ ಕಾಂತಿಮಯ ಸೂಕ್ತಿಗಳು ಕನ್ನಡಿಗರಿಗೆ ಸದಾ ಶ್ರೀರಕ್ಷೆಯಾಗಿವೆ. ಕನ್ನಡಸಾಹಿತ್ಯಕ. ಸಾಂಸ್ಕೃತಿಕ ಸಂದರ್ಭದಲ್ಲಿ ಅವರ ಅಭಿಜಾತ ಆಲೋಚನೆಗಳು ಹೊಸ ಹೊಳಹುಗಳನ್ನು ನೀಡುತ್ತಿವೆ. ಬಿ.ಎಂ.ಶ್ರೀಯವರು ಮಹಾಕಾವ್ಯವನ್ನು ಬರೆಯಲಿಲ್ಲ. ಆದರೆ ಮಹಾಕಾವ್ಯ ಬರೆಯುವವರಿಗೆ ಪ್ರೇರಕರಾದರು. ಇಂಗ್ಲಿಷ್ ಛಂದಸ್ಸು ಮತ್ತು ಕನ್ನಡ ಛಂದಸ್ಸುಗಳನ್ನು ಕಸಿಗೊಳಿಸಿದರೆ ಹೊಸಫಸಲನ್ನು ಪಡೆಯಬಹುದೆಂಬುದನ್ನು ತೋರಿಸಿಕೊಟ್ಟರು. ಹಳಗನ್ನಡ ಕಾವ್ಯಶೈಲಿಯನ್ನು ಸುಧಾರಿಸಿ ಹೊಸ ಅಭಿವ್ಯಕ್ತಿಗೆ ಬಳಸಿಕೊಳ್ಳುವ ಬಗೆಯನ್ನು ಸೂಚಿಸಿದರು. ಹೊಸಗನ್ನಡ ಛಂದಸ್ಸಿನ ಹುಟ್ಟಿಗೆ, ಭಾವಗೀತೆಯ ಸೃಷ್ಟಿಗೆ ಕಾರಣರಾದರು. ಕನ್ನಡಮಾತು ತಲೆಯೆತ್ತುವ ಪರಿಯನ್ನು ವಿವರಿಸಿದರು. ಕನ್ನಡಿಗರು ಹೇಗೆ ಕನ್ನಡವನ್ನು ಉಳಿಸಿ ಬೆಳೆಸಿಕೊಳ್ಳಬಹುದು ಎಂಬುದಕ್ಕೆ ಮಾರ್ಗದರ್ಶಿಯಾದರು. ಎಲ್ಲಕ್ಕಿಂತ ಮಿಗಿಲಾಗಿ ಸಮಸ್ತ ಕನ್ನಡಿಗರ ಮನೆ ಮನದಲ್ಲಿ ಶಾಶ್ವತವಾದ ಸ್ಥಾನವನ್ನು ಗಳಿಸಿಕೊಂಡರು.

ಕರ್ನಾಟಕ ಪರಂಪರೆಯ ಓರಿಮೆ ಗರಿಮೆಯನ್ನು ಕೊಂಡಾಡುವುದರ ಜೊತೆಗೆ, ಕನ್ನಡಿಗರ ಓರಿಮೆ ಗರಿಮೆಯನ್ನು ಎತ್ತಿತೋರಿದರು.

ನಿರಭಿಮಾನಿಗಳಲ್ಲಿ ಕನ್ನಡಾಭಿಮಾನ ಉಕ್ಕಿಹರಿಯುವಂತೆ ಮಾಡಿದರು. ಅದು ಕಡಮೆ ಸಾಧನೆಯಲ್ಲ. ಬಿ.ಎಂ.ಶ್ರೀಯವರ ಬದುಕು ಬರಹ ಅರಿವಿಗೆ ಅಮರವಾಗಿದೆ, ಆರಾಧನೆಗೆ ಅರ್ಹವಾಗಿದೆ; ಸ್ಫೂರ್ತಿಗೆ ಸೆಲೆಯಾಗಿದೆ, ಸಂವಾದಕ್ಕೆ ನೆಲೆಯಾಗಿದೆ.

ಸಿರಿಗನ್ನಡಂ ಗೆಲ್ಗೆ, ಬಾಳ್ಗೆ.

ಬಿ.ಎಂ.ಶ್ರೀ. ಸೂಕ್ತಿಗಳು

೧. ಇಂಗ್ಲಿಷ್ ಗೀತಗಳು.

ಬೆಳೆಯೇನೋ ಬೇಕಾದ ಹಾಗಿದೆ;
ಕುಯ್ಯುವರು ಕಡಮೆ.

***

ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು.

***

ಪಡುವ ಕಡಲ ಹೊನ್ನ ಹೆಣ್ಣು
ನನ್ನ ಜೀವದುಸಿರು, ಕಣ್ಣು.

***

ಇವಳ ಸೊಬಗನವಳು ತೊಟ್ಟು,
ನೋಡಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ.

***

ಯೌವನಕೆ ಚೆಲ್ಲಾಟ
ಮುಪ್ಪಿಗುಸಿರೆಳೆದಾಟ.

***

ವಸಂತ ಬಂದ ಋತುಗಳ ರಾಜ ತಾ ಬಂದ,
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ.

***

ಮನುಜನಿಗೆ ಮಗು ತಂದೆ.

***

ಜಡರು ಮರ್ತ್ಯರು ನಾವು, ತರ್ಕಿಸಿ
ಮರಣಮರ್ಮವನರಿವೆವೆ ?

ನನ್ನ ಪ್ರೇಮದ ಹುಡುಗಿ ತಾವರೆಯ ಹೊಸಕೆಂಪು,
ತಾವರೆಯ ಹೊಸ ಅರಳ ಹೊಳೆವ ಕೆಂಪು.

***

ಚಿಮ್ಮುತ ನಿರಿಯನು ಬನದಲಿ ಬಂದಳು
ಬಿಂಕದ ಸಿಂಗಾರಿ;
ಹೊಮ್ಮಿದ ಹಸುರಲಿ ಮೆರೆಯಿತು ಹಕ್ಕಿ
ಕೊರಲಿನ ದನಿದೋರಿ.

***

ಅಳಿಯದೆಯೆ ಇರುವುದೆ ವಸಂತ ಕಾಲ ?

***

ಹೆದರುವೆನು ನಾ ನಿನ್ನ ಬಿನ್ನಾಣಕೆಲೆ ಹೆಣ್ಣೆ,
ಹೆದರದಿರು ನೀನು ನನಗೆ.

***

ಒಲಿಯದಿದ್ದವೆ ಅಚ್ಚು ಮೆಚ್ಚು ,
ಒಲಿಯದಿದ್ದವೆ ಹುಚ್ಚುಹುಚ್ಚು.

***

ಒಲಿದವರು ನುಡಿಯುತ್ತಲೇ,
ಒಲುಮೆ ಮಾತುಗಳೆಲ್ಲ ಮರೆಯುತಿಹುವು.

***

ದುಃಖಿಗಳ, ಪಾಪಿಗಳ
ನಾವು ಧಿಕ್ಕರಿಸುವೆವು
ದೂರ ಅಟ್ಟುವೆವು
ಅಟ್ಟನಾ ರೀತಿಯಲಿ
ತಂದೆ, ರಕ್ಷಕನು.

***

ಆಳ ಕೈಯಲಿ ತಾಳಬಹುದೇ
ಏಳುಬೀಳಿನ ಕಡಲದು!

***

ನನಗೆ ಬೆಳಕೇ ಬೇಸರಲ್ಲ
ಒಲುಮೆಯಳಿದೀ ನೆಲದಲಿ!

***

ಜೀವಮಾನದ ಕಡೆಯ ಹಂತವ ಹತ್ತಿ ಹಿಂದಕೆ
ನೋಡಿ ನಡುಗುವೆ;
ಯಾವ ಕಾಲಕೋ ಮರಳಿ ಬರುವುದು ಆದಿಕಾಲದ
ಭೋಗಸಂಪದ ?

***

ಕಳೆದ ಹಿಂದಿನ ದಿನಗಳನು ನೆನೆ
ದಿಂದು ಕಳೆಯುವ ದಿನಗಳ.

***

ಎಲ್ಲಿ, ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು.

***

ದಾರಿ ಉದ್ದಕೂ ಬಳಸಿ ಏರುವುದೆ ?
ಅಹುದು, ಕೊನೆಯ ವರೆಗೆ.

***

ಊದು ಉಸಿರನು; ತುಂಬು
ನಂಬುಗೆಯನು
ಜೀವ, ಕಾಳಗ ಕಾದು,
ಏಳು, ಗೆಲ್ಲು.

***

ಮುಂದೆ ಮೆಲ್ಲಗೆ ಮೆಲ್ಲಗೇರುವುದು ಹೊತ್ತು–
ಹಿಂದೆ ಪಡುವಲು ನೋಡು–ನೆಲದ ಸಂಪತ್ತು!

***

ಕೊಳುವುದಾಗೆ ಕನಸುಗಳನು,
ನನ್ನ ನೋವಿಗಿದೆಯೆ ಮದ್ದು,
ಇದನೆ ಕೊಳುವೆನು.

***

ಎಲೆ ಜೀವ, ನೀನಾರೊ ನಾ ತಿಳಿಯೆನಯ್ಯ,
ತಿಳಿವೆನಿದ ನೀನು ನಾನಗಲಬೇಕಯ್ಯ!

***

ಕರುಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ,
ಕೈಹಿಡಿದು ನಡಸೆನ್ನನು.

೨. ಹೊಂಗನಸುಗಳು

ಚಿನ್ನದ ನಾಡದು,
ಮೈಸೂರು.
ಗಂಧದ ಗುಡಿಯದು,
ಮೈಸೂರು.

***

ಬೆಳೆಯುವ ನಾಡದು,
ಮೈಸೂರು.
ಇಳೆಯ ಮಾದರಿಯದು,
ಮೈಸೂರು.

***

ಏನು ಚೆಲುವಿನ ನಾಡು! ಚೆಲುವ ಚೆಲ್ಲುವ ನಾಡು!
ಕನ್ನಡದ ನಾಡು!

***

ಎಲ್ಲರೂ ಬಾಳುವೆಡೆ ನಮಗೆ ಸಾವೆ?
ಎಲ್ಲರೂ ನಲಿವ ಕಡೆ ನಮಗೆ ನೋವೆ?

***

ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಬಾಳ್ಗೆ
ಕನ್ನಡ ತಾಯ್ ಗೆಲ್ಗೆ, ಬಾಳ್ಗೆ.

***

ಕನ್ನಡದ ಬಾವುಟವ ಹಿಡಿಯದವರಾರು?
ಕನ್ನಡದ ಬಾವುಟಕೆ ಮಡಿಯದವರಾರು?
ನಮ್ಮ ಈ ಬಾವುಟಕೆ ಮಿಡಿಯದವರಾರು?

***

ಬಾಳ್ ಕನ್ನಡ ತಾಯ್
ಏಳ್ ಕನ್ನಡ ತಾಯ್
ಆಳ್ ಕನ್ನಡ ತಾಯ್
ಕನ್ನಡಿಗರೊಡತಿ ಓ ರಾಜೇಶ್ವರೀ!

***

ಮಂಗಳಮೆ ಗೆಲ್ಲು!

***

ಹೂವಾದ ಬಾಳುದಿರೆ, ಹಣ್ಣಾಗಿ ಬಹುದು–ಮತ್ತೆ ಹೂವಹುದು.

***

ಬೂದಿ ಬೂದಿಗೆ ಕೂಡೆ, ಮಣ್ಣುಮಣ್ಣಾಗೆ,
ಮೃತನಮೃತನಾಗುವನು,
ದಿವ್ಯಕಳೆಯಿನ್ ಕೂಡಿದಾತ್ಮವಾಗುವನು.

***

ಋತಮೊಂದೆ ಗೆಲ್ಲುವುದು, ಅನೃತಮಲ್ತು;
ಅಮೃತಮೆನೆ ವಿದ್ಯೆಯೆ; ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.

***

ಸರ್ವ ಜೀವಂಗಳುಂ ಮುಕ್ತಿಯಂ ಕಾಣ್ಗೆ;
ದೇವರೊಳ್ ಪಗೆವರ ಕಾಳಗಂ ಮಾಣ್ಗೆ;

***

ಸಾವುದೆಲ್ಲಾ ಸತ್ತು, ಬಾಸಾಳ್ಕೆ ಪೂಣ್ಗೆ.

***

ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ

***

ಯುದ್ಧವೆಂಬ ಪಿಶಾಚ ಯಜ್ಞಕೆ
ಬದ್ಧರಹ ರಾಕ್ಷಸರ ಸಾಹಸ
ಬುದ್ಧಿಕೌಶಲವೇಕೆ? ಐಸಿರಿಯೇಕೆ? ಬಿಸುಡು, ಸುಡು!

***

ಓಡಿಹೋಗಲಿ ಭಯದ ನುಡಿಗಳು,
ಮೂಡಿ ತೂಗಲಿ ನಗುತ ಬೆಳೆಗಳು,
ನೀಡು ದಯವನು ದಣಿಗೆ ನೆಮ್ಮದಿಬದುಕ ಬಡವನಿಗೆ.

***

ಬರೆವರ ಬಾಯೊಳೊಲವಿರ್ಕೆ ಚೆಲುವಿರ್ಕೆ,
ನಲವಿರ್ಕೆ, ನಾಡಗೆಲವಿರ್ಕೆ.

೩. ಅಶ್ವತ್ಥಾಮನ್

ಇಂದವನ್, ನಾಳೆ ನಾನ್. ಏನ್ ಪಾಡೊ ಆಳ ಬಾಟ್!
ಬೀಸುವ ಬಯಲ್ ಗಾಳಿ, ಪರಿದಡಂಗುವ ನೆಟಿಲ್!

***

ಮಿತಿಯಱಿದು ನೆಗೞ್ವರ್ಗೆ ದೇವರ್ಕಳ್ ಒಸೆದಪರ್ ಮುಳಿದಪರ್ ಮಿಕ್ಕರನ್.

***

ಬಾಟ್ ಬಱಿಯದಾದಂದು,ಸಾವು ತಾನ್ ಪೂರ್ಣಂ?

***

ಚೆಲ್ವಿನ ನೆಲೆ, ಕಣ್ಗಳ ಬಲೆ, ಸುಖದೊಱತೆಯ ಬನವಾಸೀ,
ಬಳೆದಲೆದಾ ಕಾನ್ ಮಲೆಗಳನ್ ಆನ್ ಮಱೆವೆನೆ, ಬನವಾಸೀ!

***

ಈ ಬಾಱಿಂದಂ ಸಾವುದೆ ಸುಖಮೇ!
ಮತಿ ಪಾೞಾಗಲ್ ಸಾವುದೆ ಸುಖಮೇ!

***

ಕಾಲಚಕ್ರಂ ಪೊರಳೆ, ಮುಚ್ಚಿದುದು ಬೆಳಕಕ್ಕುಂ,
ಇರ್ದುದಿಲ್ಲಕ್ಕುಂ.

***

ಮನುಜಂಗೆ ಸ್ನೇಹಮೆಂಬುದು ಪುಸಿಯ ನಚ್ಚು.

***

ಪಿಡಿಯಲ್ಕೆವೇೞ್ಕುಮೇ ಸಾಯಲ್ ಓಡುವನನ್!

***

ಸತ್ತರೊಳ್ ಪುರುಡಿಸುವ ಶೂರರ್ ಇರ್ಪರ್ ಕೆಲರ್.

***

ಆಳ್‌ಸಿರಿಗೆ ಕಱುಬುವುದು ದೈವಂ.

***

ನುಡಿಯಿಸಲ್ ಬಲ್ಲಂಗೆ ಬಿಲ್ಲೊಂದು ,
ಮೀಣ್ ಜೀಣೆಯೊಂದು.

***

ಕಾದ ದೇವತೆಗಳ್ಗೆ ಕಡೆಗಣಿಸಿ ನಡೆಯದಿರ್.

***

ಓ ಪೊಲ್ಲ ಯುದ್ಧಮೇ,
ಎಂದು ನಿಲ್ವಯ್!
ಓ ತಾಯೆ ಶಾಂತಿಯೇ
ಎಂದು ಗೆಲ್ವಯ್!

***

ಮಕ್ಕಳಿಲ್ಲದ ತಾಯ್ವಿರ್! ತಂದೆಯಿಲ್ಲದ ಮಕ್ಕಳ್ !
ಮೃತ್ಯುದೇವತೆಯೊರ್ವಳ್ ಆನಂದಿಸಲ್ ತಕ್ಕಳ್!

***

ದ್ವೇಷಮ್ ಎನಿತಿರ್ದೊಡಂ, ತುಳಿಯದಿರು
ಧರ್ಮಮನ್.

***

ಕಲಿ ಸಾಯೆ, ಪಗೆಗಳುಂ
ಪೊಗಟ್ಟುದದು ಶೀಲಂ–ನೋಯಿಸುವುದಲ್ತು.

***

ದುಃಖಮುಂ ಕ್ರೋಧಮುಂ ಮಾಡುವುದು
ಸಯ್ತಲ್ತು.

***

ಕೆಳೆಯಂಗೆ ಸೋಲ್ವುದೆ ಜಯಂ;
ಕ್ಷಮೆಯೆ ತಾನ್ ಜಯಂ;
ಕ್ರೋಧಮನ್ ತುಳಿದಿಟ್ಟು, ಬಲ್ವಿಡಿದು ಧರ್ಮಮನ್,
ಬಗೆಯೊಡನೆ ಪೋರಾಡುವುದೆ ಜಯಂ.

***

ಪಿಂದೆ ಪಗೆ, ಮುಂದೆ ಕೆಳೆ.

***

ಇಂದೇನೊ, ಮುಂದೇನೊ, ಮುನ್ನೆ ಆಳ್ ಕಾಣನ್.
ಬಂದುದನೆ ಕೊಂಡುಂಡು ತಾಳ್ದವನೆ ಜಾಣನ್

***

ರುದ್ರನ್ ಒಲ್ದೊಡೆ ಉಳಿವು
ಒಲ್ಲದೊಡೆ ಒಡನಳಿವು

***

ತಪ್ಪಿನಡೆದೊಡೆ ರುದ್ರನ್ ಒಲ್ಲದೆಯೆ ಮಾಣನ್,
ಅಳವಜಿತು ನಡೆಯೆ ಶಿವನ್ ಒಲ್ಲದೆಯೆ ಮಾಣನ್.

***

೪. ಕನ್ನಡ ಮಾತು ತಲೆಯೆತ್ತುವ ಬಗೆ

(ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಸಭೆಯಲ್ಲಿ ಮಾಡಿದ ಉಪನ್ಯಾಸ, ಡಿಸೆಂಬರ್ ೧೯೧೧)

ಒಂದಿನಂತೆ ಒಡೆದುಕೊಂಡೇ ಇದ್ದವೇ, ಬಿದ್ದೇಹೋಗುವೆವು; ಒಗ್ಗಟ್ಟಾದೆವೇ, ಇನ್ನೂ ನಿಲ್ಲುವ ಆಸೆಯುಂಟು.

***

ಎರಡಲ್ಲ, ಇಪ್ಪತ್ತು ದೇಶಭಾಷೆಗಳಿದ್ದರೂ ಒಗ್ಗಟ್ಟಿಗೆ ಕುಂದಕವಿಲ್ಲ; ಎಲ್ಲಾ ಕಡೆಯಲ್ಲಿಯೂ ಆಡಬಹುದಾದ ಒಂದು ರಾಜಭಾಷೆಯ ಜೊತೆಗೆ ಎಷ್ಟು ಬೇಕಾದರೂ ಇವು ಇರಬಹುದು. ಒಂದೇ ಏಕಭಾಷೆಯಿಲ್ಲದೆ ಏಕ ರಾಜ್ಯವಿಲ್ಲ ಎನ್ನುವ ಮಾತು ಸುಳ್ಳು.

***

ಐಕಮತ್ಯವೆಂದರೆ ಎಲ್ಲರೂ ಒಂದೇ ಪಡಿಯಚ್ಚಾಗಿ ಸ್ವತಂತ್ರವನ್ನು ನೀಗಿಕೊಳ್ಳಬೇಕೆಂದಲ್ಲ; ಭೇದವಿರಬೇಕಾದ ಕಡೆ ಭೇದವೂ ಸಾಮ್ಯವಿರಬೇಕಾದ ಕಡೆ ಸಾಮ್ಯವೂ ಮುಖ್ಯ. ಪರಸ್ಪರ ವಿಶ್ವಾಸವಿದ್ದಲ್ಲಿ ಎರಡೂ ಐಕಮತ್ಯದಲ್ಲಿ ಸೇರಬಹುದು

***

ಜನರಿಗೆ ಹಿರಿಯರಿಂದ ಬಂದ ಒಡವೆಗಳಲ್ಲಿ ಭಾಷೆ ಒಂದು.

***

ನಮ್ಮ ಭಾಷೆಯನ್ನು ನಾವು ಎತ್ತದೇ ಹೋದರೆ, ಎತ್ತುವರು ಯಾರು? ಎತ್ತುವುದಕ್ಕೆ ನಿಂತರೆ, ತಡೆಯುವರು ಯಾರು?

***

ನಮ್ಮ ಮಾತೇನೂ ನೆನ್ನೆ ಮೊನ್ನೆಯ ಕಾಡುಮಾತಲ್ಲ. ನಮ್ಮ ಕಾವ್ಯಮಾಲಿ ಓದುಬರಹ ಬರದ ಒಡ್ಡರು ಹೇಳುವ ಕುರುಕು ಪದವೂ ಅಲ್ಲ. ಆರ್ಯರು ಇಂಡಿಯಕ್ಕೆ ಬರುವುದಕ್ಕೆ ಮೊದಲೆ ಇಲ್ಲಿ ದ್ರಾವಿಡ ಭಾಷೆ ನೆಲಸಿತ್ತು.

***

(ಹಿಂದಿನ ಸಾಹಿತ್ಯ) ಭಂಡಾರವನ್ನೆಲ್ಲಾ ಕೂಡಿಟ್ಟು ಕಾಪಾಡಿಕೊಂಡು ಮುಂದೆ ಹೆಚ್ಚಿಸುತ್ತಾ ಹೋಗುವದು ಬಿಟ್ಟು, ಇದ್ದಬದ್ದದ್ದನ್ನೆಲ್ಲಾ ಕೆರೆಯಲ್ಲಿ ಮುಳುಗಿಸಿ ಕೈಬೀಸಿಕೊಂಡು ಮನೆಗೆ ಬರುವಷ್ಟು
ಮರುಳುತನ ಎಲ್ಲಾದರೂ ಉಂಟೆ?

***

ಸೂತ್ರಕ್ಕೆ ಸ್ವತಂತ್ರವನ್ನು ಮಾರಿಕೊಂಡ ಕವಿಗಳಿಗೆ ಚಮತ್ಕಾರ ಏನು ಇದ್ದೀತು?

***

ಯಾವ ಮಾತುಗಳನ್ನು ಜನಮಂಡಲಿ ಪರಭಾಷೆಯೆಂಬ ಗಮನವೇ ಇಲ್ಲದೆ ಬಳಸುವುದೋ ಅವೆಲ್ಲಾ ಕನ್ನಡಕ್ಕೇ ಸೇರಿಹೋದವು.

***

ಜನರನ್ನೆಲ್ಲ ಮುಂದಾದರೂ ಪುಸ್ತಕದ ಕಡೆ ಆಸಕ್ತಿಯಿಡುವಂತೆ ಮಾಡಿಯೇ ತೀರಬೇಕು

***

ತಾಯಿಬೇರನ್ನು ಕಡಿದು ಮರವನ್ನು ಚಿಗುರಿಸುವುದಕ್ಕೆ ಹೇಗೆ ಆಗಲಾರದೋ ಹಾಗೆಯೇ ನಮ್ಮ ಪೂರ್ವವನ್ನು ಅಳಿಸಿಬಿಟ್ಟು ಭವಿಷ್ಯಕ್ಕೆ ಹಾರುವುದಕ್ಕೆ ಆಗಲಾರದು.

***

ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯುವುದರಲ್ಲಿ ಯಾವ ಬುದ್ಧಿವಂತಿಕೆಯೂ ಇಲ್ಲ.

***

ರೈಲನ್ನು ರೈಲೆಂದೇ ಕರೆಯುವುದು ಉತ್ತಮ; ಹೊಗೆಬಂಡಿ, ಹೊಗೆಗಾಡಿ ಎನ್ನುವುದು ಮಧ್ಯಮ; ಧೂಮಶಕಟ ವೆನ್ನುವುದು ಅಧಮ.

***

ಬಾವಿಯಲ್ಲಿ ಸೀನೀರು ಸಿಕ್ಕುತ್ತಿರುವಾಗ ಕಡಲಲ್ಲಿ ಹೋಗಿ ಉಪ್ಪು ನೀರು ಕಡಿಯತಕ್ಕದ್ದಲ್ಲ.

***

ಸತ್ಯದಿಂದ ಎಂದಿಗೂ ಲೋಪವಿಲ್ಲ.

***

ಏನು ತಿದ್ದುಪಾಟು ಆಗಬೇಕಾದರೂ ಪೂರ್ವಪದ್ಧತಿಯನ್ನು ಸಮಗ್ರವಾಗಿ ಪರಿಶೋಧಿಸದೆ ಯತ್ನವಿಲ್ಲ.

***

ಮಾತೃಭಾಷೆಯನ್ನು ಸಾಯಿಸುವ ಮಾತನ್ನು ಇಲ್ಲಿಗೇ ಬಿಟ್ಟು ಬಿಡೋಣ.

***

ನಮ್ಮ ಅದೃಷ್ಟ ನಮ್ಮ ಕೈಯಲ್ಲೇ ಅಡಗಿದೆ. ಬಲದಿಂದ, ಸಾಹಸದಿಂದ ಕೆಲಸಕ್ಕೆ ಹೊಕ್ಕರೆ ಯಾವುದು ಹರಿಯುವುದಿಲ್ಲ?

***

ಲೋಕವೆಲ್ಲಾ ಬಗ್ಗುವುದು ಶ್ರೇಷ್ಠವಾದ ಬುದ್ಧಿಗೆ ತಾನೇ; ಆ ಬುದ್ಧಿ ತಾವರೆಯ ಹಾಗೆ ಅರಳುವುದು ಕಾವ್ಯರತ್ನದ ಬೆಳಕಿನಿಂದಲೇ.

೫. ಕನ್ನಡಕ್ಕೆ ಒಂದು ಕಟ್ಟು.

ಬರೆಯುವ ಭಾಷೆಗೆ ಆಡುವ ಭಾಷೆಯೇ ಜನ್ಮಸ್ಥಾನ. ಕಾವ್ಯವನ್ನು ಮೊದಲು ಬರೆದವನು ಆಡುವ ಭಾಷೆಯಲ್ಲಿ ತಾನೇ ಬರೆದಿರಬೇಕು.

***

ನಮ್ಮ ಅಭಿಪ್ರಾಯವನ್ನು ಬೇರೆಯವರಿಗೆ ಹೇಳುವುದಕ್ಕಾಗಿ ಶಬ್ದಗಳೇ ಹೊರತು, ಅವರ ಕಿವಿಯಲ್ಲಿ ಆರ್ಭಟ ಮಾಡುವುದಕ್ಕಲ್ಲ.

***

ಸಂಸ್ಕೃತ ಕನ್ನಡವನ್ನು ಕೊಚ್ಚಿಹಾಕಿದಹಾಗೆ, ಕಟ್ಟಿಲ್ಲದೆ ಹೋದರೆ ಇಂಗ್ಲಿಷ್, ಹಿಂದೂಸ್ಥಾನಿಯೂ ಕೊಚ್ಚಿಹಾಕುವುವು.

ಲಂಘನವೇ ಗುಣವೆಂದು ನಂಬಿದ್ದೇವೆ.

ಕವಿಯ ಸೃಷ್ಟಿಕಾರ್ಯಕ್ಕೆ ಭಾಷೆಯೇ ಸಾಮಗ್ರಿ; ಆದರೆ ಅದರಿಂದ ಸ್ಪಷ್ಟವಾದ ಸುಂದರವಾದ ಜಗತ್ತನ್ನು ನಿರ್ಮಾಣ ಮಾಡುವವರೆಗೂ ನಿಮ್ಮ ಮಾತೆಲ್ಲಾ ಮಂಜಿನ ಮಬ್ಬೇ.

೬. ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ

(ಕಲಬುರ್ಗಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ. ೧೯೨೮)

ದೇಶಸೇವೆ, ಭಾಷಾಸೇವೆ ಇವುಗಳ ಪುಣ್ಯವು ಬಯಸಿದವರಿಗೆಲ್ಲಾ ದೊರಕದು.

***

ಒಂದು ದೇಶದ ಶ್ರೇಯೋಭಿವೃದ್ಧಿಗೆ ಆವಶ್ಯಕವಾದ ಅನೇಕ ಮುಖವಾದ ಸಾಧನಗಳಲ್ಲಿ ಸಾಹಿತ್ಯಕೃಷಿ ಒಂದಾಗಿರುತ್ತದೆ.

***

ಒಳ್ಳೆಯ ಸಾಹಿತ್ಯವನ್ನು ಪಡೆದ ಜನಾಂಗದ ಹೃದಯದಲ್ಲಿ ಜ್ಞಾನವೂ ನಿಷ್ಕಲ್ಮಷವಾದ ಆನಂದವೂ ಸತ್ಪ್ರೇರಣೆಯೂ ಸಮಾಜದ ಪುನರ್ನಿರ್ಮಾಣದ ಕಾರ್ಯದಲ್ಲಿ ಐಕಮತ್ಯವೂ ಬಲವಾಗಿ ಬೇರೂರುತ್ತದೆ.

***

ತಾರತಮ್ಯ ಜ್ಞಾನವುಳ್ಳವರು ಯಾರುತಾನೇ ಕೀಳನ್ನು ಮೇಲೆಂದೂ ಸಾಮಾನ್ಯವಾದುದನ್ನು ಉತ್ಕೃಷ್ಟವೆಂದೂ ಕಳಂಕಮಿಶ್ರವಾದುದನ್ನು ಪರಿಶುದ್ಧವೆಂದೂ ಅರ್ಧಪಕ್ವವಾದ ಕಲಾಚಾತುರ್ಯವನ್ನು ಪೂರ್ಣ ಸಂಸ್ಕೃತ ಕಲೆಯ ಪರಮಪದವೆಂದೂ ಹೇಳಲಾದೀತು?

***

ಕರ್ನಾಟಕದ ಪೂರ್ವಚರಿತ್ರೆಯನ್ನೂ ಪ್ರಕೃತ ಸಾಹಸ ಗಳನ್ನೂ ನೆನಸಿಕೊಂಡರೆ. ನಮ್ಮ ಪುರೋಭಿವೃದ್ಧಿಯಲ್ಲಿ ಯಾವಸಂದೇಹಕ್ಕೂ ಕಾರಣವಿರುವುದಿಲ್ಲ.

***

ವೀರ್ಯವಿದ್ದಲ್ಲಿ ವೇಷ ಭಾಷೆಗಳನ್ನು ಯಾರು ಕೇಳುವರು?

***

ಜೇನುಹುಳು ಯಾವಹೂವಿನ ಮಕರಂದವನ್ನು ತಂದರೂ ಕೊನೆಗೆ ಎಲ್ಲ ತನ್ನ ಜೇನುತುಪ್ಪವನ್ನಾಗಿಯೇ ಹೇಗೆ ಮಾಡಿಕೊಳ್ಳುವುದೋ ಹಾಗೆ ಎಲ್ಲವೂ ಕನ್ನಡವೇ ಆಗಿ ಹೋದರೆ, ಆಗ ಹೊರಗಿನದು ಎಲ್ಲಿ ಬಂತು?

***

ಹಿಂದೆ ಯೂರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮ ವುಂಟಾಗಿ, ಒಬ್ಬ ಮಹಾಪಂಡಿತನು "ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ". ಎಂದು ಘೋಷಿಸಿದನು. ನಾವು.

***

ಕನ್ನಡಿಗರು, ಇಂದು, ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನೂ ಎಚ್ಚರ ಗೊಳಿಸುವುದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿಯಾಗಿ ಮಾಡುವುದಕ್ಕೇ ಅಲ್ಲ; ಹೊಸ ಉತ್ತಮ ಸಾಹಿತ್ಯವೊಂದನ್ನು ಸೃಷ್ಟಿಮಾಡುವುದಕ್ಕೆ ಹೊರಟಿರುವೆವು.

***

ನಮಗೆ ಭಗವಂತನು ದಯಪಾಲಿಸಿರುವ ವರಪ್ರಸಾದ ಗಳನ್ನೂ ಬಗೆಬಗೆಯಾದ ಶಕ್ತಿ ರುಚಿಗಳನ್ನೂ ಕನ್ನಡನಾಡಿಗೆ, ಕನ್ನಡನುಡಿಗೆ ಒಮ್ಮನಸ್ಸಿನಿಂದ ಮುಡಿಪುಕಟ್ಟೋಣ; ಒಮ್ಮೆಯ್ಯಾಗಿ ಅವುಗಳ ಏಳಿಗೆಯಲ್ಲಿ ಏಳಿಗೆಯಾಗೋಣ.

***

(ಕನ್ನಡ) ತಾಯಿ ಧನ್ಯಳಾದರೆ; ಮಕ್ಕಳೂ ಧನ್ಯರಲ್ಲವೇ?

೭. ದಿವ್ಯ ಮಂತ್ರ

(ಮೈಸೂರಿನಲ್ಲಿ ನಡೆದ ೧೬ನೇ ಸಾಹಿತ್ಯ ಸಮ್ಮೇಳನದ ಸ್ವಾಗತ ಭಾಷಣ ೫-೧೦-೧೯೩೦)

(ಕನ್ನಡ) ಯುವಕರ ಸ್ವದೇಶಭಕ್ತಿ, ಸಾಹಸಗಳನ್ನು ನೋಡಿದ ಯಾವ ವೃದ್ಧನಿಗೇ ತಾನೆ ಹೃದಯದಲ್ಲಿ ರಕ್ತ ಮತ್ತೆ ಬಿಸಿಯಾಗಿ ಯೌವನ ಮತ್ತೊಮ್ಮೆ ಚಿಮ್ಮದೇ ಇದ್ದೀತು?

***

ಮಲಗಿದ್ದ ಜನರು ಎಚ್ಚತ್ತಿದ್ದಾರೆ; ಹಳೆಯ ಆತ್ಮದಿಂದ ಹೊಸ ಆತ್ಮವನ್ನು ಸೃಷ್ಟಿಮಾಡುತ್ತಿದ್ದಾರೆ; ಸತ್ಯ, ಸೌಂದರ್ಯ,ಸ್ವಾತಂತ್ರ್ಯ,ಸ್ವಾರ್ಥತ್ಯಾಗ,ಸೇವೆ, ಇವೇ ನಮ್ಮ ಜೀವಮಾನದ ದೀಪಿಕೆಗಳೆಚಿದು ಸಾರುತ್ತಿದ್ದಾರೆ.

***

ನಮ್ಮ ಚಿತ್ತಶುದ್ಧಿ,ನಮ್ಮ ಆತ್ಮ ವಿಶಾಲತೆ ಪೂರ್ಣತ್ವದ ಸಾನ್ನಿಧ್ಯಕ್ಕೆ ಬಂದ ಹಾಗೆಲ್ಲಾ, ನಮ್ಮಿಂದ ಉತ್ತಮ ಸಾಹಿತ್ಯ, ಉತ್ತಮ ಸಾಹಿತ್ಯದಿಂದ ಉತ್ತಮ ಜನ್ಮ ಹೊಮ್ಮುವುದು.

***

ಭಗವತ್ಕೃಪೆಯಿಂದ ನಮ್ಮ ಕೈಯಲ್ಲಾದ ಕೈಂಕರ್ಯವನ್ನು-ನಮ್ಮ ದೇಶಕ್ಕೇ ಎಂದು ವೀರಭಾವದಿಂದ ನಾನು ಹೇಳುವುದಿಲ್ಲ-ಸಾಧ್ಯವಾದರೆ ಜಗತ್ತಿಗೇ ಮಾಡಬೇಕು.

೮. ಕನ್ನಡ ಪುನರುಜ್ಜೀವನ

(ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮಾಡಿದ ಭಾಷಣ:೨೬.೪.೧೯೩೫)

(ಪುನರುಜ್ಜೀವನ ಎನ್ನುವುದು) ಬರಿಯ ಪುನರುತಥಾನವಲ್ಲ, ಎನ್ನುವುದು) ಜೀರ್ಣೋದ್ಧಾರವಲ್ಲ, ಅನುಸರಣವಲ. ಅನುಕರಣವಲ್ಲ, ಪುನರುಜ್ಜೀವನ ಏನೋ ಒಂದು ಬಗೆಯ ಧೈರ್ಯಕೂಡಿದ ವಿಚಾರ; ಹೊಸ ಹೊಸ ನಿರ್ಮಾಣ, ಮರುಹುಟ್ಟು; ಆಳವಾದ ಸಮನ್ವಯ-ಹೊಸದು,ಹಳದು,ನಮ್ಮದು,ಹೆರರದುಎಲ್ಲವನ್ನೂ; ಹೊಂದಿಕೆಮಾಡುವುದು.

***

ಹಿರಿಯರು ಹೇಳಿದಮಾತೂ ಇರಲಿ, ನಾವೂ ವಿಚಾರ ಮಾಡೋಣ. ತಿಳಿದುಕೊಳ್ಳೋಣ, ತಿಳಿದು ನಡೆಯೋಣ, ಎನ್ನುವುದೇ ಪುನರುಜ್ಜೀವನದ ಲಕ್ಷಣ.

***

ಕನ್ನಡ ದೇಶದಲ್ಲಿ ಕನ್ನಡವೇ ದೇಶಭಾಷೆ. ನೂರರಲ್ಲಿ ಎಂಬತ್ತು ಜನರಿಗೆ ಇದೇ ಮಾತೃಭಾಷೆಯಾಗಿಯೂ ಇದೆ.

***

ಕನ್ನಡದ ಬೇರನ್ನು ಕೊಯ್ದು, ಕನ್ನಡ ನಾಡನ್ನು ಒಂದುಗೂಡಿಸಬಹುದೆ?

***

ಕನ್ನಡ ನಾಡಿನ ದೇಶಭಾಷೆ ಕನ್ನಡ ಎಂಬ ಆಧಾರದಮೇಲೆಯೇ ಕನ್ನಡನಾಡು ಮತ್ತೆ ಹುಟ್ಟಬೇಕಾಗಿದೆ.

***

"ಕನ್ನಡನಾಡಿಗೆ ಕನ್ನಡವೇ ಗತಿ. ಅನ್ಯಥಾಶರಣಂ ನಾಸ್ತಿ". ಸಂಸ್ಕೃತವಲ್ಲ. ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ.

***

ಕನ್ನಡ ಭಾಷೆಗೆ ಯಾವ ರೀತಿಯಲ್ಲಿಯೂ ಅಪಾಯತಟ್ಟದ ಹಾಗೆ ಕನ್ನಡ ನಾಡಿನಲ್ಲಿ ಅದಕ್ಕೆ ಪ್ರಧಾನಸ್ಥಾನವನ್ನು ಕೊಟ್ಟು ಭಗವಂತನು ನಮಗೆ ಕೊಟ್ಟಿರತಕ್ಕ ಬಲವನ್ನು- ಧನಬಲವನ್ನು ಮತ್ತು ಬುದ್ಧಿಬಲವನ್ನು-ಅದಕ್ಕಾಗಿ ವಿನಿಯೋಗಿಸುವುದು ಕನ್ನಡಿಗರ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ.

***

(ಕನ್ನಡ ಸಾಹಿತ್ಯ) ಪರಿಷತ್ತಿನ ಮುಖ್ಯವಾದ ಕೆಲಸ ಕನ್ನಡದ ಸ್ಥಾನವನ್ನು ಕಾದಿರುವುದು: ಕನ್ನಡದ ಶ್ರೇಷ್ಠತೆಯನ್ನು ಹೆಚ್ಚಿಸುವುದು; ಕನ್ನಡದ ಹೆಚ್ಚು ಹೆಚ್ಚು ಸೇವೆಗೆ ಕನ್ನಡಿಗರನ್ನು ಒಲಿಸುವುದು.

***

ಸಂಸ್ಕೃತ-ಕನ್ನಡದ ವಾದ ಬಂದುದರಿಂದಲೇ ಮಾರ್ಗ, ದೇಶಿ ಎಂಬ ಎರಡು ರೀತಿಗಳು ಹುಟ್ಟಿಕೊಂಡುವು.

***

ಇತರ ಭಾಷೆಗಳ ಸಂಪರ್ಕವೇ ಇಲ್ಲದೆ ಬರೆಯುತ್ತೇನೆ ಎನ್ನುವ ವೀರಪಂಥವೂ ಬೇಡ, ಅವನ್ನೇ ಅತಿಯಾಗಿ ಬೆರಸಿ ಕನ್ನಡ ಭಾಷೆಯನ್ನು ಕೊಚ್ಚಿಸುವ ಪರಭಾಷಾವ್ಯಾಮೋಹವೂ ಬೇಡ.

***

ಬೊಜ್ಜು ಬಲವಲ್ಲ.

***

ಸಂಸ್ಕೃತದ ಸಾರವನ್ನು ಕನ್ನಡ ಹೀರಿತು; ಆದರೆ ತಾನು ಮಾತ್ರ ಜಗ್ಗಲಿಲ್ಲ.

***.

ಕುಮಾರವ್ಯಾಸನಲ್ಲಿ ಕನ್ನಡ, ತಿಳಿಗನ್ನಡ, ತಿರುಳ್ಗನ್ನಡ ಗೆದ್ದಿತು. ಇನ್ನು ಅದಕ್ಕೆ ಭಯವಿಲ್ಲ.

***

ಮೊದಲಿನಿಂದಲೂ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ನೋಡಿದರೆ ಒಂದು ರಹಸ್ಯ ಸ್ಪಷ್ಟವಾಗುತ್ತದೆ; ಏನೆಂದರೆ ಕನ್ನಡ ವೈಶಿಷ್ಟ್ಯವನ್ನು ಉಳಿಸಿಕೊಳ್ಳುವುದು; ಇತರ ಯಾವ ಭಾಷೆಯಿಂದ ಯಾವ ವಸ್ತುವನ್ನು ಯಾವ ಸಾಮಗ್ರಿಯನ್ನು ತೆಗೆದುಕೊಂಡರೂ ಕನ್ನಡ ಅಚ್ಚಿನಲ್ಲಿ ಅದನ್ನಿಳಿಸಿ ಕನ್ನಡವನ್ನು ಮುಂದುಮಾಡಿ ಅದಕ್ಕೇ ಪ್ರಧಾನಸ್ಥಾನವನ್ನು ಕೊಡುವುದು.

***

ಸಾಹಿತ್ಯ ಬೆಳೆಯುಬೇಕಾದರೆ ಬರಿಯಲಕ್ಷಣಗಳಿಗೆ, ಸೂತ್ರಗಳಿಗೆ, ಕಟ್ಟುಬಿದ್ದಿರಬೇಕಾದುದಿಲ್ಲ. ಸಾಹಿತ್ಯದಿಂದ ಲಕ್ಷಣಸೂತ್ರಗಳೇ ಹೊರತು ಲಕ್ಷಣಸೂತ್ರಗಳಿಂದ ಸಾಹಿತ್ಯವಲ್ಲ.

***

ಪುನರುಜ್ಜೀವನಕ್ಕೆ, ಸ್ವಾತಂತ್ರ್ಯಕ್ಕೆ, ಹೊಸ ಆತ್ಮಕ್ಕೆ ಪ್ರಳಯವೂ ಬೇಕು, ಸೃಷ್ಟಿಯೂ ಬೇಕು. ಅದಕ್ಕಾಗಿ ಬಿಡುವುದೂ ಉಂಟು; ಇಡುವುದೂ ಉಂಟು; ಸೇರಿಸುವುದೂ ಉಂಟು. ಹೊಸದನ್ನು ಕಲಿಯುವುದರಿಂದ ದೇಶವೂ ಮುಳುಗುವುದಿಲ್ಲ, ಭಾಷೆಯೂ ಕೆಡುವುದಿಲ್ಲ, ಸತ್ಸಂಪ್ರದಾಯವೂ ಅಳಿಯುವುದಿಲ್ಲ. ಅದರಲ್ಲಿ ಜೀವವಿಲ್ಲದ್ದು ಹೋಗಲಿಬಿಡಿ. ಸಂಸ್ಕೃತವನ್ನು ಜೀರ್ಣಿಸಿಕೊಂಡು, ಇಂಗ್ಲಿಷನ್ನೂ ಜೀರ್ಣಿಸಿಕೊಂಡು ಉಳಿದಂತೆ ಉಳಿದು, ಕನ್ನಡವನ್ನು ಉಳಿಸಿಬೆಳಸಿ! ಸಂಸ್ಕೃತದಲ್ಲಿಯೂ ಇಂಗ್ಲಿಷಿನಲ್ಲಿಯೂ ಸಿಕ್ಕದ್ದು ಹಿಂದಿಯಲ್ಲೇನಾದರೂ ಸಿಕ್ಕಿದರೆ ಅದನ್ನೂ ಕೊಳ್ಳಿ.

***

ನಮ್ಮ ಹಳ್ಳಿಯವರ ಭಾಷೆಗಾಗಿ ತಾವು ಮುಡಿಯಿರಿ. ಕನ್ನಡ ನಾಡಿಗಾಗಿ ಕನ್ನಡ ಜನಕ್ಕಾಗಿ ತಾವು ಕನ್ನಡವನ್ನು ಹಿಡಿಯಿರಿ.

***

ನಿಮ್ಮ, ನನ್ನ ಜೀವಮಾನದ ತೀರ್ಪು ನಮ್ಮ ಕನ್ನಡತಾಯ ಸೇವೆ.

***

೯. ಕನ್ನಡಹಬ್ಬ

(ಮೈಸೂರು ನಗರದಲ್ಲಿ ನಡೆದ ಕನ್ನಡ ಉತ್ಸವದ ಅಧ್ಯಕ್ಷ ಭಾಷಣ–೧೪–೧೨–೧೯೩೭)

ಕನ್ನಡ ನಾಡಿನಲ್ಲಿ ದಿವ್ಯ ತೇಜಸ್ಸಿದೆ.

***

ಕನ್ನಡಿಗರಾದ ನೀವು ಯಾರಿಗೂ ತಲೆತಗ್ಗಿಸಬೇಕಾಗಿಲ್ಲ. ತಲೆ ಎತ್ತಿ ನಡೆಯಬೇಕಾಗಿದೆ.

ಮುಖ್ಯವಾಗಿ ನಮ್ಮ ಹೆಣ್ಣು ಮಕ್ಕಳು ಕನ್ನಡಕ್ಕಾಗಿ ಕೊಂಚ ಕರುಳನ್ನು ಮರುಗಿಸಿಕೊಂಡು, ಕನ್ನಡ ತಾಯಿಯ ಸೇವೆಗಾಗಿ ಕೊಂಚಮನಸ್ಸು ಮಾಡಿದರೆ, ಕನ್ನಡ ನಾಡಿನ ಮತ್ತು ನುಡಿಯ ಭವಿಷ್ಯಕ್ಕೆ ಯಾವ ಭಯವೂ ಇಲ್ಲ.

***

ಯಾವ ವಿಶ್ವಮಾತೆಯನ್ನು ನಾವು ಸೇವಿಸಿದರೂ ನಮ್ಮ ಮಾತೆಯನ್ನು ಮಾತ್ರ ಬಿಡುವಂತಿಲ್ಲ. ನಮ್ಮ ತಾಯಿ ಎಷ್ಟೇ ಬಡವೆಯಾದರೂ ಆಕೆಯನ್ನು ಕೀಳಾಗದಂತೆ ಮಕ್ಕಳು ನೋಡಿಕೊಳ್ಳ ಬೇಕು.

***

ನಮ್ಮ ಮನೆಯಲ್ಲಿ ತಾಯಿಯನ್ನು ಉಪವಾಸವಿರಿಸಿ ಊರುತ್ಸವಕ್ಕೆ ಹೋಗುವುದೆ? ಪ್ರಪಂಚದ ಉತ್ಸವದಲ್ಲಿ ಮನೆಯನ್ನು ಬರಿದು ಮಾಡುವುದೆ! ಕನ್ನಡ ಮಾತೆಯ ಮೂಲಕ ಭಾರತಮಾತೆಯನ್ನು ಸೇವಿಸೋಣ. ಕನ್ನಡಮಾತೆ ಉದ್ಧಾರವಾದರೆ ಭಾರತಮಾತೆಯೂ ವೃದ್ಧಿಯಾಗುತ್ತಾಳೆ.

***

ಕನ್ನಡ ತಾಯಿಯನ್ನು ಮರೆಯದೆ ಆಕೆಯ ಮೂಲಕ ಸರ್ವವನ್ನೂ ಸಾಧಿಸೋಣ. ತಾಯಿ ಹೆಮ್ಮೆಪಟ್ಟುಕೊಂಡರೆ ಮಕ್ಕಳು ಬದುಕಿ ಹೋಗುತ್ತಾರೆ.

೧೦. ಪರಿಷತ್ತಿನ ಧ್ಯೇಯ

(ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಚುನಾಯಿತರಾದಾಗ ನಡೆದ ಅಭಿನಂದನ ಕಾರ್ಯಕ್ರಮಕ್ಕೆ ಉತ್ತರವಾಗಿ ಮಾಡಿದ ಭಾಷಣ- ೨೦.೨.೧೯೩೮)

ಕನ್ನಡ ತಾಯಿಗಾಗಿ ಭಿಕ್ಷೆಬೇಡುವ ದಾಸಯ್ಯ ನಾನು.

***

ಕನ್ನಡ ನನಗೆ ಮುಂದು, ಉಳಿದುದು ಅದೇನಿದ್ದರೂ ಅದರ ಹಿಂದು.

***

ಕನ್ನಡದ ಕಾವಲು ನಾಯಿ ನಾನು; ಅದಕ್ಕೆ ಕಾವು ತಟ್ಟುವುದಾದರೆ ನಾನು ಬಗುಳುವುದುಂಟು: ಕಚ್ಚುವ ನಾಯಲ್ಲ.

***

ಪ್ರೇಮಮಯಿಯಾಗದವನು ಮನುಷ್ಯನಲ್ಲ, ನನ್ನ ಮೂಲಮಂತ್ರ ಇಷ್ಟೆ. ನಮ್ಮ ಮುಂದಾಳುಗಳಿಗೆ, ವಿದ್ಯಾವಂತರಿಗೆ ಕನ್ನಡದಲ್ಲಿ ಇನ್ನೂ ನಂಬಿಕೆ ಸಾಲದು; ಮನಸ್ಸು ಎತ್ತೆತ್ತಲೋ ಹರಿಯುತ್ತಿದೆ. ಕನ್ನಡವನ್ನು ನಂಬಿ, ಕನ್ನಡವನ್ನು ಕೈಹಿಡಿಯಿರಿ; ಕನ್ನಡಿಗರನ್ನು ಎಚ್ಚರಿಸಿ ಮುಂದಕ್ಕೆ ನಡೆಸಿ; ಕನ್ನಡ ನಾಡನ್ನು ಬೆಳಗಿಸಿ. ಇದು ನಮ್ಮ ಗುರಿ, ಇದು ನಮ್ಮ ಸಾಧನೆ.

೧೧. ಬಿನ್ನಹ: ತಾಯಿಯ ಕೈಂಕರ್ಯಕ್ಕೆ ನಿಲ್ಲಿ

(೨೬.೧.೧೯೩೮.)

ಕನ್ನಡ ನುಡಿ, ಕನ್ನಡ ನಯ, ಕನ್ನಡ ಜನ ಒಂದಾಗಬೇಕಾಗಿದೆ: ಮುಂದಾಗಬೇಕಾಗಿದೆ. ಕನ್ನಡ ನಾಡು ಕೂಡ ಬೇಕಾಗಿದೆ. ಆಳುವವರು, ಹಿರಿಯರು, ಕಿರಿಯರು, ಎಲ್ಲ ಕನ್ನಡ ನಾಡಿಗರೂ ಸೇರಿ ಒಂದು ಕೇಂದ್ರ ಸ್ಥಾನವನ್ನು ಕಟ್ಟಿದರು, ಕನ್ನಡ ತಾಯ ಗುಡಿಯಾಗಿ: ಅದು (ಕನ್ನಡ ಸಾಹಿತ್ಯ) ಪರಿಷತ್ತು.

***

ಸಿರಿಗನ್ನಡಂ ಗೆಲ್ಗೆ! ಕನ್ನಡ ತಾಯ್ ಬಾಳ್ಗೆ!

***

ಒಂದು ಮಾತಿನಲ್ಲಿ ಕನ್ನಡಿಗರ ಪುನರುಜ್ಜೀವನ ಕನ್ನಡ ಸಾಹಿತ್ಯ ಪರಿಷತ್ತಿನ ಗುರಿ. ಒಟ್ಟಿನಲ್ಲಿ ಪರಿಷತ್ತು ಕನ್ನಡಿಗರ ಸಾರ್ವಜನಿಕ ವಿದ್ಯಾಪೀಠ.

೧೨. ಪರಿಷತ್ತು ಕನ್ನಡಮಹಾಜನರ ವಿಶ್ವವಿದ್ಯಾನಿಲಯವಾಗಬೇಕು

(ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಗೌರವಾರ್ಥ ಏರ್ಪಡಿಸಿದ್ದ ಸಂತೋಷಕೂಟದ ಸ್ವಾಗತ ಭಾಷಣ, ೨೭.೨.೧೯೩೮)

ನಾನು ಈ(ಸಾಹಿತ್ಯ) ಪರಿಷತ್ತನ್ನು ಮಹಾಜನರ ವಿಶ್ವವಿದ್ಯಾನಿಲಯವಾಗಿಯೂ ಮಹಾಜನರ ವಿದ್ಯಾಭ್ಯಾಸ ಖಾತೆಯಾಗಿಯೂ ಪರಿಣಾಮಗೊಳಿಸ ಬೇಕೆಂದು ಸಂಕಲ್ಪಮಾಡಿದ್ದೇನೆ.

***

ಕನ್ನಡ ತಾಯಿ ಮೈಸೂರು ಸಂಸ್ಥಾನದಲ್ಲಿಯೂ ಮೈಸೂರು ಸಂಸ್ಥಾನದ ಹೊರಗೂ ಇರುವ ಕನ್ನಡ ಕಂದರನ್ನೆಲ್ಲ ಪ್ರೀತಿಯಿಂದ ಕರೆಯುತ್ತಿದ್ದಾಳೆ. ಬನ್ನಿ. ಅವಳ ಸೇವೆಗೆ ಸಿದ್ಧರಾಗಿ, ಅವಳ ಸೇವೆಯಿಂದ ಧನ್ಯರಾಗಿ.

***

೧೩. ಐದನೆಯ ವಸಂತ ಸಾಹಿತ್ಯೋತ್ಸವ

(ಸ್ವಾಗತ ಭಾಷಣ–ಏಪ್ರಿಲ್, ಮೇ ೧೯೩೮)

ಕನ್ನಡ ದೇಶದಲ್ಲಿ ನೆಲಸಿರುವ, ತೆಲುಗು, ತಮಿಳು ಭಾಷೆಗಳನ್ನಾಡುವ ಜನರು ಕನ್ನಡಿಗರಾಗಬೇಕು; ಕನ್ನಡಕ್ಕೆ ಹೊಂದಿಕೊಳ್ಳಬೇಕು; ಅದರ

***

ಹೊಟ್ಟೆಯಲ್ಲಿ ಮುಳ್ಳಾಗಿ ನಿಲ್ಲಬಾರದು. ತಮಿಳು. ತೆಲುಗು ಭಾಷೆಗಳು ಕನ್ನಡಕ್ಕೆ ಅಕ್ಕತಂಗಿಯರು.

***

ಹೆಂಗಸರು ಸಾಹಿತಿಗಳಾಗಬೇಕಾದುದು ಈ ಕಾಲಕ್ಕೆ ಅತ್ಯಾವಶ್ಯಕ.

***

ಕನ್ನಡಿಗರ ಕನ್ನಡ ಮಮತೆ ವಾತ್ಸಲ್ಯಗಳೂ ಕನ್ನಡನಾಡಿನ ಏಕೀಕರಣದ ಸಾಧನೆಯೂ ಬೆಮ್ಮಬೇಕೆಂಬ ಭಾವನೆಯಿಂದ ಈ (ಕನ್ನಡ ಬಾವುಟ) ಪುಸ್ತಕವನ್ನು ಪ್ರಕಟಿಸಿದೆ.

***

(ಕನ್ನಡ ಸಾಹಿತ್ಯ) ಪರಿಷತ್ತು ಎಲ್ಲರ ಶಕ್ತಿಯನ್ನೂ ಸಂಪಾದಿಸಿ, ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯ– ಎಲ್ಲವೂ ಬೆಳೆಯುವಂತೆ, ಹೊಸಚೈತನ್ಯ ಕನ್ನಡಿಗರಲ್ಲಿ ಉಂಟಾಗು ವಂತೆ ಕೆಲಸ ಮಾಡಬೇಕಾಗಿದೆ.

***

ಕನ್ನಡ ಹರವು ದಿನದಿನಕ್ಕೆ ಹೆಚ್ಚುತ್ತಿದೆ.

***

ಕೇಳಿದುದನ್ನು ಕೊಡುವವರ ಬಳಿ ನಮ್ಮ ಕೆಲಸವೇನು? ಮೇಲಿಂದಮೇಲೆ ಕೇಳುವುದು ತಾನೆ?

***

೧೪. ಅತಿ ಸರ್ವತ್ರ ವರ್ಜಯೇತ್

(ಜೈನ ಸಮ್ಮೇಳನದ ಪ್ರಾರಂಭೋತ್ಸವ ಭಾಷಣ–೨೩.೧೦.೧೯೩೯)

ಹೊಂದೊಡರ್ರೂ ತೊಡರಲ್ಲವೆ?

***

ಎಚ್ಚತ್ತ ಜನಪದಗಳು ಒಂದು ಜನಪದವಾಗಲಿ.

***

೧೫. ನನ್ನ ಜೀವದುಸಿರು

(ಜೈನ ಮಹಾಸಮ್ಮೇಳನದವರು ಅರ್ಪಿಸಿದ ಅಭಿನಂದನ ಪತ್ರಿಕೆಗೆ ಉತ್ತರ: ೨೩.೧೦.೧೯೩೯)

ಸಾಧಾರಣರಾದ ನನ್ನಂತಹವರಿಗೆ ಧ್ಯೇಯವೇ ಸಮಾಧಾನ, ತಣಿವು.

***

ಡಿಳ್ಳಿ ನನಗೆ ಬಲುದೂರ, ಕನ್ನಡನಾಡಿನ ಹಳ್ಳಿ ನನಗೆ ಸಾಕೆಂದು ನನ್ನವಿದ್ಯಾಭ್ಯಾಸ ಮುಗಿಯುವುದರೊಳಗೆ ನಾನು ನಿರ್ಧರಿಸಿದೆನು.

***

ನನ್ನ ಜೀವದ ಜೀವಾಳದಲ್ಲಿ ಜೈನಾಂಶವೂ ಸೇರಿದೆ.

***

ನನ್ನನ್ನು ಕ್ರಾಂತಿಕಾರನೆಂದು ಹೇಳುತ್ತೀರಿ. ನಾನು ತುಂಟನಲ್ಲ; ಶಾಂತಿ ಪ್ರಿಯ.

***

ನಮ್ಮ ಮೈಯಲ್ಲಿ ಹುಟ್ಟಿದ ರೋಗ ನಮ್ಮದಾದರೂ ಕಳೆಯತಕ್ಕ ವಿಷ; ಹೊರಗಿನ ಕಾಡಿನಿಂದ ತಂದ ಮೂಲಿಕೆ, ಹೊರಗಿನದಾದರೂ ರಕ್ತಗತವಾಗಬೇಕಾದ ಅಮೃತ.

***

೧೬. ನಮ್ಮ ಕುಲ ಕನ್ನಡ ಕುಲ

(ಎಮ್ಮಿಗನೂರು ಕರ್ಣಾಟಕ ಸಂಘದ ಪ್ರಾರಂಭೋತ್ಸವದ ಭಾಷಣ, ಏಪ್ರಿಲ್ ೧೯೪೦)

ಪ್ರಪಂಚದ ನಾಗರಿಕ ಜನಾಂಗಗಳಲ್ಲಿ ಒಬ್ಬರಾದ ನಾವು ಅಮರರಾಗಿ ಉಳಿಯಬೇಕು. ಉತ್ತಮರೀತಿಯಿಂದ ಬಾಳಬೇಕು.

***

ಕನ್ನಡಿಗರಾದ ನಾವು ಸುಸಂಘಟಿತರಾಗಬೇಕು. ನಮ್ಮ ನಾಡು–ನುಡಿಯ ಸೇವೆ ಸಲ್ಲಿಸಲು ಮುಂದುವರಿಯುವಾಗ ಹಿಂದೂ–ಮುಸಲ್ಮಾನ, ಬ್ರಾಹ್ಮಣ–ಬ್ರಾಹ್ಮಣೇತರ ಎಂಬ ಸಂಕುಚಿತಾಭಿಪ್ರಾಯಗಳನ್ನು ಬದಿಗೊತ್ತಿ ನಮ್ಮ ಕುಲ ಕನ್ನಡ ಕಲ, ಗೋತ್ರ–ಸೂತ್ರಗಳೆಲ್ಲವೂ ಕನ್ನಡವೇ. ನಮಗೆ ' 'ಕನ್ನಡ ಗೆಲ್ಗೆ' – 'ಕನ್ನಡ ಬಾಳ್ಗೆ' ಎಂಬುದೇ ನಿತ್ಯವೂ ಪಠಿಸುವ ಪಂಚಾಕ್ಷರ ಮಹಾಮಂತ್ರವೆಂದು ಭಾವಿಸಬೇಕು. ಪ್ರತಿಯೊಬ್ಬ ಕನ್ನಡಿಗನೂ ಕನ್ನಡಮ್ಮನ ಪೂಜಾರಿಯಾಗಬೇಕು. ಆಕೆಯ ಆಶೀರ್ವಾದ ಹೊಂದಿ ಭಾರತಾಂಬೆಯ ಪೂಜೆಗೆ ಮುಂದಡಿಯಿಡಬೇಕು.

***

ಗಡಿನಾಡಿನಲ್ಲಿ ವಾಸಿಸುವ ಕನ್ನಡಿಗರ ಸ್ಥಿತಿ ಬಹಳ ಶೋಚನೀಯವಾಗಿದೆ.

೧೭. ರುದ್ರ ನಾಟಕ

(ಮೈಸೂರು ಪ್ರಾಂತ ಸಮಿತಿಯಲ್ಲಿ ಮಾಡಿದ ಪ್ರಾರಂಭ ಭಾಷಣ, ೧.೨.೧೯೪೧)

ಬೇಯದ ಒಲೆ ಯಾವುದು? ಸಾಯದ ಮನೆ ಯಾವುದು?

***

ಸಾಹಿತ್ಯವೆಲ್ಲಾ ಮಿಠಾಯಿಯಲ್ಲ; ಕಹಿ ಔಷಧವೂ ಉಂಟು.

***

೧೮. ಭಗವಾನ್ ಬುದ್ಧ

(ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಧರ್ಮಪ್ರವರ್ತಕರ ಉತ್ಸವದ ಭಾಷಣ: ೨೯.೬.೧೯೪೧)

ಉಪನಿಷದ್ವಾಕ್ಯಗಳಿಗೂ ಭೌದ್ಧಧರ್ಮಕ್ಕೂ ಬಹಳ ನಿಕಟ ಸಂಬಂಧವಿದೆ. ಉಪನಿಷತ್ತುಗಳು ಸಾರುವ ತಿಳಿವು ಬೌದ್ಧಧರ್ಮದಲ್ಲಿ ಇಲ್ಲದೇ ಇಲ್ಲ. ಧರ್ಮವನ್ನು ನಂಬಬೇಕು. ತಿಳಿಯಬೇಕು,ನಡೆಯಬೇಕು.

***

ದಯೆ, ಧರ್ಮ, ಸತ್ಯ ಉಂಟು ಎಂದು ನಂಬಿ ನಡೆಯುವವರೂ ಆಸ್ತಿಕರೇ: ನಡೆಯದವರು ನಾಸ್ತಿಕರೇ, ಏನೇ ನಂಬಿದರೂ.

***

೧೯. ನನ್ನ ಜೀವಮಂತ್ರ

(ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರೀಯವರ ೫೭ನೇ ಹುಟ್ಟು ಹಬ್ಬ ಆಚರಿಸಿ. ಸಂಭಾವನೆ ಅರ್ಪಿಸಿದಾಗ ಮಾಡಿದ ಭಾಷಣ: ೧೪.೯.೧೯೪೧)

ಎಲ್ಲಾ ಧರ್ಮೀಯರೂ ನಾನು ಸಧರ್ಮಿ ಎಂದು ತಿಳಿದಿರುವುದೇ ನನ್ನ ಒಂದು ಧನ್ಯತೆ ಹಾಗೂ ನಾನು ಧನ್ಯ.

***

'ಗುರು' ದೊಡ್ಡ ಹೆಸರು: ನಾವು ಸಂಬಳದ ಉಪಾಧ್ಯಾಯರು.

***

ನಮಗೆ ಅದು (ಕನ್ನಡ ತಾಯಿ) ಹೆತ್ತ ತಾಯಿ; ಮಹಾ ವೈಭವದಿಂದ ಬಾಳಿದ ಜನತೆಯ ಉಸಿರು, ಕಣ್ಣು.

***

ಕನ್ನಡ ಬದುಕಿದೆ–ಬೆಳೆಯುತ್ತಿದೆ.

***

ಕಲಿಯುವುದೇ ನನ್ನ ಜೀವನದ ಕರೆ; ಕಲಿಯುವುದು, ಕಲಿತದ್ದನ್ನು ತಿಳಿಯದವರಿಗೆ ಕಲಿಸುವುದು.

***

ಈ ಪ್ರಪಂಚದಲ್ಲಿ ನಿರ್ದುಷ್ಟವಾದದ್ದು, ಪರಿಪೂರ್ಣ-ವಾದದ್ದು ಯಾವುದೂ ಇಲ್ಲ. ಎಲ್ಲದರಲ್ಲೂ ಒಂದು ಸತ್ವವಿದೆ, ಒಂದು ವೈಶಿಷ್ಟ್ಯವಿದೆ, ಹಾಗೆಯೇ ಕೊರತೆಯಿದೆ, ಕಲ್ಮಷವಿದೆ ಎಂದು ನನ್ನ ಭಾವನೆ.

***

ಒಡಕುಹುಟ್ಟಿಸುವ ಮೋಟುಗೋಡೆಗಳನ್ನು ಒಡೆದು, ಮುಚ್ಚಿದ ಕಿಟಕಿಗಳನ್ನು ತೆರೆದು, ಎಲ್ಲ ದಿಕ್ಕುಗಳಿಂದಲೂ ಅಳವನ್ನೂ ಅಂದವನ್ನೂ ತುಂಬಿಕೊಂಡು ಕನ್ನಡ ಮಹಾಕಾವೇರಿಯಾಗಿ ಹರಿಯಬೇಕು, ಕನ್ನಡಿಗರ ಭಾಗ್ಯವಿಧಾತೆಯಾಗಿ ಬೆಳಗಬೇಕು, ಸಂಯುಕ್ತ ಭಾರತಕ್ಕೆ ಚತುರ್ಭುಜವಾಗಿ ನಿಲ್ಲಬೇಕು.

***

ಎಲ್ಲಾ ಮತಗಳಲ್ಲಿಯೂ ಎಲ್ಲಾ ಸಾಹಿತ್ಯಗಳಲ್ಲಿಯೂ ಚಿನ್ನವೂ ಉಂಟು; ಹಿತ್ತಾಳೆಯೂ ಉಂಟು. ಜೀವ ರಸವೂ ಉಂಟು, ಬರಿಯ ಭ್ರಾಂತಿಯ ಕಸವೂ ಉಂಟು.

***

ಅಂಧಶ್ರದ್ಧೆಯಿಂದ ಬಿಡುಗಡೆಯನ್ನೂ ಒಂದು ದೊಡ್ಡಕೆಲಸಕ್ಕಾಗಿ ಒಕ್ಕಟ್ಟನ್ನೂ ಧ್ಯೇಯ ಸಾಧನೆಯಿಂದ ಸೌಖ್ಯವನ್ನೂ ಪಡೆದು, ಸ್ವತಂತ್ರ ಸಂಯುಕ್ತ ಸುಖಮಯ ಭಾರತದಲ್ಲಿ (a free united happy India) ಬಾಳೋಣ ಎಂಬುದೇ ನನ್ನ ಜೀವನದ ರಹಸ್ಯ; ನನ್ನ ಕನ್ನಡ ಕೆಲಸದ ಗುಟ್ಟು; ನನ್ನ ಮಿಡಿತ, ಕುದಿತ.

ಉಪಾಧ್ಯಾಯನಾಗಿ ಕನ್ನಡ ತಾಯ ಕೃಪಾಕಟಾಕ್ಷಕ್ಕೆ ಪಾತ್ರನಾದೆ. ಆಕೆ ನನ್ನನ್ನು ತನ್ನ ಸೇವೆಗೆ ಕರೆದಳು. ಧನ್ಯನಾದೆ.

***

ಸರ್ವರ ಕರುಣದ ಶಿಶು ನಾನು ನಾಡ ತೊತ್ತು.

***

೨೦. ಬೀಳ್ಕೊಡುಗೆ

(ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಸ್ಥಾನದಿಂದ ಬಿಡುಗಡೆಯಾದಾಗ: ೨೧.೧೨.೧೯೪೨.)

(ಕನ್ನಡ ಸಾಹಿತ್ಯ) ಪರಿಷತ್ತಿನ ನಮ್ಮ ಆಸೆ, ನೋಟ, ಕನಸು ಬಲು. ದೊಡ್ಡದು

ನಿಮ್ಮ ಪ್ರೇಮವನ್ನೆಲ್ಲಾ ನನ್ನ ಹೃದಯದಲ್ಲಿ ತುಂಬಿಕೊಂಡಿದ್ದೇನೆ- ಹಿಡಿಯಲಾರದೆ ಅದು ಬಿರಿಯುತ್ತಿದೆ, ದಾಳಿಂಬೆಯ ಹಣ್ಣಿನಂತೆ! ನಾನು ಇದರಲ್ಲಿ ಧನ್ಯ

***

ಒಲುಮೆಗಿಂತ ಗೆಲವಿಲ್ಲ. ಒಕ್ಕೂಟಕ್ಕಿಂತ ಬಲವಿಲ್ಲ..

***

ಧರ್ಮದ ಹೊಸಹುಟ್ಟು, ಭಾರತದ ಬಿಡುಗಡೆ, ಕರ್ನಾಟಕದ ಒಕ್ಕೂಟ. ಕನ್ನಡದಲ್ಲಿ ವಿಶ್ವಸಂಸ್ಕೃತಿ-ಇವು ಎಲ್ಲೆಲ್ಲಿ ಮಿಡಿಯುತ್ತಿವೆ ಅಲ್ಲಿ ನಾನೂ ಮಿಡಿಯುತ್ತೇನೆ.

***

೨೧. ಜನಪದ ಸಾಹಿತ್ಯ

('ಗರತಿಯ ಹಾಡು' ಸಂಗ್ರಹದ ಪ್ರಸ್ತಾವನೆ-೧೯೩೭)

ಆದಿಯಲ್ಲಿ ದೇವತಾಪ್ರೇರಣೆಯಿಂದ ಹುಟ್ಟಿದುದೇ ಕವಿತಾವಾಣಿ; ಅದು ಋಷಿಗಳಲ್ಲಿಯೂ ಮಹಾಕವಿಗಳಲ್ಲಿಯೂ ಕಾಣುವುದು.

***

ಜನವಾಣಿ ಬೇರು: ಕವಿವಾಣಿ ಹೂವು.

***

ಒಂದು ವೇಳೆ ಋಷಿಮೂಲ ನದಿ ಮೂಲಗಳನ್ನು ಯಾವ ಶ್ರದ್ಧೆಯಿಂದ ಪೂಜಿಸುವರೋ ಅದೇ ಶ್ರದ್ಧೆಯಿಂದ ಈ (ಜನಪದ) ಸಾಹಿತ್ಯ ಪ್ರವಾಹ ಮೂಲವನ್ನು ಪೂಜ್ಯಭಾವದಿಂದ ಕಾಣುವರು.

***

ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ.

ಸಿರಿಗನ್ನಡಂ ಗೆಲ್ಗೆ, ಬಾಳ್ಗೆ.

ಬಿ.ಎಂ.ಶ್ರೀಕಂಠಯ್ಯ ಅವರ
ಜೀವನದ ಮೈಲಿಗಲ್ಲುಗಳು

೩.೧.೧೮೮೪– ಜನನ. ಸಂಪಿಗೆ, ತುಮಕೂರು ಜಿಲ್ಲೆ. ತಾಯಿಯ ತೌರುಮನೆ. ಸ್ವಂತಊರು: ಬೆಳ್ಳೂರು–ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.

೧೯೦೨– ವರೆಗೆ ಬಾಲ್ಯ, ಪ್ರಾಥಮಿಕ ಶಿಕ್ಷಣ.

೧೯೦೩– ಎಫ್.ಎ., ಶಿಕ್ಷಣ ಶ್ರೀರಂಗಪಟ್ಟಣ, ಮೈಸೂರು

೧೯೦೪– ಮದುವೆ. ಹೆಂಡತಿ : ದೇವಮ್ಮ (ಗುಂಡಮ್ಮ). ಮಕ್ಕಳು: ಶಾರದಮ್ಮ, ತಂಗಮ್ಮ, ತಮ್ಮಯ್ಯ.

೧೯೦೬– ಬಿ.ಎ.,ಬೆಂಗಳೂರು(೨೨ನೆಯ ವಯಸ್ಸು)

೧೯೦೭– ಬಿ.ಎಲ್.ಮದರಾಸು(೨೩ನೆಯ ವಯಸ್ಸು)

೧೯೦೯– ಎಂ.ಎ.,(೨೫ನೆಯ ವಯಸ್ಸು)

೧೨.೧.೧೯೧೦– ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕ

೧೯೧೧– 'ಕನ್ನಡ ಮಾತು ತಲೆಯೆತ್ತುವ ಬಗೆ' ಕುರಿತು ಧಾರವಾಡದಲ್ಲಿ ಭಾಷಣ

೧೯೧೨– ' Rhetoric Notes ' ರಚನೆ

೧೯೧೪– ಇಂಗ್ಲಿಷ್ ಅಸಿಸ್ಟೆಂಟ್ ಪ್ರೊಫೆಸರ್

೧೯೧೫– ಪತ್ನಿ ದೇವಮ್ಮ ನಿಧನ

೧೯೧೯– ಇಂಗ್ಲಿಷ್ ಜೂನಿಯರ್ ಪ್ರೊಫೆಸರ್

೧೯೨೧– 'ಇಂಗ್ಲಿಷ್ ಗೀತಗಳು ' ಪ್ರಕಟಣೆ

೧೯೨೩- ಎರಡನೆ ದರ್ಜೆ ಇಂಗ್ಲಿಷ್ ಪ್ರೊಫೆಸರ್
೧೯೨೬- 'ಗದಾಯುದ್ಧ ನಾಟಕಂ' ಪ್ರಕಟಣೆ
೧೯೨೬-೩೦- ಮೈಸೂರು ವಿಶ್ವವಿದ್ಯಾನಿಲಯ ರಿಜಿಸ್ಟ್ರಾರ್
೧೯೨೭- ಕನ್ನಡದ ಗೌರವಪ್ರಾಧ್ಯಾಪಕ
೧೯೨೮- ಕಲಬುರ್ಗಿಯಲ್ಲಿ ನಡೆದ ೧೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೨೯- 'ಅಶ್ವತ್ಥಾಮನ್' ನಾಟಕ ಪ್ರಕಟಣೆ
೧೯೩೦- ಮೊದಲದರ್ಜೆ ಇಂಗ್ಲಿಷ್ ಪ್ರೊಫೆಸರ್, ಅಳಿಯ ಗುಂಡಪ್ಪ ನಿಧನ
೧೯೩೧- ಮೈ.ವಿ.ವಿ. ಗ್ರಂಥಮಾಲೆ ಪ್ರಾರಂಭ, ಅದರ ಪ್ರಧಾನ ಸಂಪಾದಕ
೧೯೩೪- ಪುತ್ತೂರು ದಸರಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೩೫- 'ಪಾರಸಿಕರು' ಪ್ರಕಟಣೆ
೧೯೩೮- 'ರಾಜ ಸೇವಾಸಕ್ತ' ಬಿರುದು, ಶ್ರೀಕೃಷ್ಣರಾಜ ಒಡೆಯರ್ ಅವರಿಂದ
೧೯೩೮-೪೩ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ
'ಕನ್ನಡ ನುಡಿ' ವಾರಪತ್ರಿಕೆ ಪ್ರಾರಂಭ,
ಕ.ಸಾ.ಪ. ದಲ್ಲಿ ಮಹಿಳಾ ಶಾಖೆ ಪ್ರಾರಂಭ
೧೯೩೯- ಮೈಸೂರು ಜೈನ ಅಸೋಸಿಯೇಷನ್‌ನಿಂದ ಸನ್ಮಾನ ಕ.ಸಾ.ಪ.ದಲ್ಲಿ ೭೨೦೦ರೂ. ಕೊಡುಗೆಯಿಂದ 'ಬಿ.ಎಂ.ಶ್ರೀ. ಅಚ್ಚುಕೂಟ' ಪ್ರಾರಂಭ
೧೯೪೧- 'ಸಂಭಾವನೆ' ಗ್ರಂಥ ಸಮರ್ಪಣೆ

೧೯೪೨–	ನಿವೃತ್ತಿ. ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ
೧೯೪೩–	'ಹೊಂಗನಸುಗಳು' ಪ್ರಕಟಣೆ
೧೯೪೪–	ಧಾರವಾಡ ಕೆ.ಇ.ಬೋರ್ಡ್(ಜೆಎಸ್‌ಎಸ್ ಕಾಲೇಜು) ಕಲಾ ಕಾಲೇಜಿನ ಪ್ರಾಂಶುಪಾಲ
೫.೧.೧೯೪೬–	ಧಾರವಾಡದಲ್ಲಿ ನಿಧನ. (೬೨ರ ವಯಸ್ಸಿನಲ್ಲಿ)
೧೯೪೮–	'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ', 'ಇಸ್ಲಾಂ ಸಂಸ್ಕೃತಿ', ಮಹಮ್ಮದ್ ಅಬ್ಬಾಸ್ ಷೂಸ್ತ್ರಿ ಅವರ ಗ್ರಂಥದ ಅನುವಾದ, ಪ್ರಕಟಣೆ
೬.೫.೧೯೭೯–	ಬೆಂಗಳೂರಿನಲ್ಲಿ 'ಬಿಎಂಶ್ರೀ. ಸ್ಮಾರಕ ಪ್ರತಿಷ್ಠಾನ' – ಎಂ.ವಿ. ಸೀತಾರಾಮಯ್ಯನವರಿಂದ ಸ್ಥಾಪನೆ
೧೯೮೩–	'ಶ್ರೀ ಸಾಹಿತ್ಯ' ಸಮಗ್ರ ಕೃತಿ ಸಂಪುಟ ಪ್ರಕಟಣೆ, ಮೈಸೂರು ವಿ.ವಿ.
೧೯೮೪–	ಜನ್ಮಶತಮಾನೋತ್ಸವ ಆಚರಣೆ : 'ಶ್ರೀನಿಧಿ', 'ಶ್ರೀಉತ್ಸವ', 'ಶ್ರೀಗಂಧ' ಸಂಸ್ಮರಣ ಸಂಪುಟಗಳ ಸಮರ್ಪಣೆ.
೧೯೯೫–	ಬೆಳ್ಳೂರಿನಲ್ಲಿ 'ಆಚಾರ್ಯ ಬಿಎಂಶ್ರೀ ಶತಮಾನ ಭವನ' ನಿರ್ಮಾಣ, ಬಿ.ಎಂ.ಶ್ರೀ. ಪ್ರತಿಷ್ಠಾನದ ಶಾಖೆ ಆರಂಭ.
೨೦೦೨–	ಬೆಂಗಳೂರಿನಲ್ಲಿ ಬಿಎಂಶ್ರೀ ಲೋಹದ ಪ್ರತಿಮೆ ಸ್ಥಾಪನೆ, ಕೆ.ಆರ್. ರಸ್ತೆ, ನ್ಯಾಷನಲ್ ಕಾಲೇಜು ವೃತ್ತದಲ್ಲಿ.
೨೦೦೩–	ಬೆಳ್ಳೂರಿನಲ್ಲಿ ಬಿಎಂಶ್ರೀ ಶಿಲಾ ಪುತ್ಥಳಿ ಅನಾವರಣ.
೧೦.೯.೨೦೦೪–	ಬೆಂಗಳೂರಿನಲ್ಲಿ 'ಬಿ.ಎಂ.ಶ್ರೀ.ಪ್ರತಿಷ್ಠಾನ ರಜತೋತ್ಸವ ದಲ್ಲಿ ಬಿಎಂಶ್ರೀ ಕಲಾಭವನ' ಲೋಕಾರ್ಪಣೆಮತ್ತು ಬಿ.ಎಂ.ಶ್ರೀ. ಲೋಹದ ಪುತ್ತಳಿ ಅನಾವರಣ

ಬಿ.ಎಂ.ಶ್ರೀ.ಅವರ ಕೃತಿಗಳು

೧. ಕನ್ನಡ ಇಂಗ್ಲಿಷ್ ವಿಚಾರಗಳು (೧೯೧೩)

೨. ಇಂಗ್ಲಿಷ್ ಗೀತಗಳು (೧೯೨೧)

೩. ಗದಾಯುದ್ಧ ನಾಟಕಂ (೧೯೨೬)

೪. ಅಶ್ವತ್ಥಾಮನ್(ನಾಟಕ) (೧೯೨೯)

೫. ಪಾರಸಿಕರು(ನಾಟಕ) ೧೯೩೫)

೬. ಕನ್ನಡ ಛಂದಸ್ಸಿನ ಚರಿತ್ರೆ (ಕನ್ನಡ ಕೈಪಿಡಿ ಭಾಗ-೧ ರಲ್ಲಿ-೧೯೩೬)

೭. ಕನ್ನಡ ಬಾವುಟ (ಸಂಪಾದಿತ- ೧೯೩೮)

೮. ಹೊಂಗನಸುಗಳು(ಕವನಗಳು) (೧೯೪೩)

೯. ಕನ್ನಡ ಸಾಹಿತ್ಯ ಚರಿತ್ರೆ (ಕನ್ನಡ ಕೈಪಿಡಿ ಭಾಗ-೨ ರಲ್ಲಿ-೧೯೪೭)

೧೦. ಕನ್ನಡಿಗರಿಗೆ ಒಳ್ಳೆಯಸಾಹಿತ್ಯ (ಲೇಖನ ಸಂಗ್ರಹ) (೧೯೪೮)

೧೧. ಇಸ್ಲಾಂ ಸಂಸ್ಕೃತಿ (೧೯೪೮).

೧೨. ಕನ್ನಡ ಕೈಪಿಡಿ(ಸಂಪಾದನೆ)

೧೩. Improvment of Kannada (A Hand book of Rhetoric 1919- (೧೯೮೫)

೧೪. ಶ್ರೀ ಸಾಹಿತ್ಯ (ಸಮಗ್ರ ಸಾಹಿತ್ಯ) (೧೯೮೩)

ಬಿ.ಎಂ.ಶ್ರೀ. ವಂಶವೃಕ್ಷ

ಬೆಳ್ಳೂರು ಮೈಲಾರಯ್ಯ
(ಹೆಂ. – ಭಾಗೀರಥಮ್ಮ)

- ಬಿ.ಎಂ.ಶ್ರೀಕಂಠಯ್ಯ (ದೇವಮ್ಮ)
  - ಶಾರದಮ್ಮ (ಗುಂಡಪ್ಪ)
    - ವಿಶಾಲಾಕ್ಷಿ (ವಿಶ್ವೇಶ್ವರಯ್ಯ)
      - ವಿದ್ಯಾ (ವಿಕ್ರಂ)
      - ಶ್ರೀಕಂಠ (ಸಂಧ್ಯಾಶರ್ಮ) (ಕವಿ ರಾಮಚಂದ್ರಶರ್ಮರ ಅಳಿಯ)
  - ತಂಗಮ್ಮ (ಎನ್.ಡಿ.ಎನ್.ರಾವ್)
    - ರತ್ನ ಎನ್.ರಾವ್
    - ಕಲ್ಯಾಣ ಎನ್.ರಾವ್
    - ವಿಜಯಎನ್.ರಾವ್
    - ಎಸ್.ಎನ್.ರಾವ್
  - ತಮ್ಮಯ್ಯ (ಅವಿವಾಹಿತ)
- ಕಾವೇರಮ್ಮ (ಕೃಷ್ಣಸ್ವಾಮಿ)
- ನಂಜಮ್ಮ (ಎನ್.ಎಸ್. ನಾರಾಯಣರಾವ್)
- ಶಿವರಾಮಯ್ಯ (ಲಲಿತ)
- ಕೃಷ್ಣಸ್ವಾಮಿ (ತಂಗಮ್ಮ)

ರಜತೋತ್ಸವ ಗ್ರಂಥಮಾಲೆ

1.	ಸಾಹಿತ್ಯೋಪಾಸಕರು (19ನೇ ಶತಮಾನದ ಸಾಹಿತಿಗಳ ಜೀವನ ಸಾಧನೆ)	200–00
2.	ಗ್ರಂಥಸಂಪಾದನಾ ಪರಿಭಾಷಾಕೋಶ	61–00
3.	ಕನ್ನಡ ತಿರುಕ್ಕುರಳ್	100–00
4.	ಶ್ರೀಕೃಷ್ಣ ಲೀಲಾಗಾನಂ	100–00
5.	ಕಾರಂತ ಕಿರಣ	30–00
6.	ತಿಮ್ಮಪ್ಪದಾಸರ ಕೀರ್ತನೆಗಳು	75–00
7.	ವೆಂಕಟದಾಸರು ಮತ್ತು ಇತರ ಅದ್ವೈತ ಹರಿದಾಸರ ಕೀರ್ತನೆಗಳು	100–00
8.	ಬಿ.ಎಂ. ಶ್ರೀಕಂಠಯ್ಯ (ವ್ಯಕ್ತಿಚಿತ್ರ ಮತ್ತು ಸೂಕ್ತಿಗಳು)	20–00
9.	ಎಂ.ವಿ. ಸೀತಾರಾಮಯ್ಯ (ವ್ಯಕ್ತಿಚಿತ್ರ ಮತ್ತು ಸೂಕ್ತಿಗಳು)	20–00
10.	ಬಿ.ಎಂ.ಶ್ರೀ. ಪ್ರತಿಷ್ಠಾನ–25	25–00

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ಬೆಂಗಳೂರು